# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಆಗಸ್ಟ್ 16, 2020

ಸಂಪುಟ : 47 ಸಂಚಿಕೆ : 98 ದೂರವಾಣಿ : 254736 ವಾಟ್ಸ್ಆ್ಯಪ್ : 91642 99999 ಪುಟ : 8 ರೂ : 4.00 www.janathavani.com Email: janathavani@mac.com






ಶ್ರೀ ಮೃತ್ಯುಂಜಯ ಎಜುಕೇಷನಲ್ ಟ್ರಸ್ಟ್ (ರಿ.) ದೂ : 08192-230770, 9743210028

ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್

principalsmsondvg@gmail.com met.ipms@gmail.com # 694, ಚರ್ಚ್ ಕಾರ್ನರ್, 8ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-02

ಪ್ರವೇಶ ಪ್ರಾರಂಭ

ಕ್ಯಾಂಪಸ್ ಸಂದರ್ಶನ ಇರುತ್ತದೆ.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಮುಗಿಸಿದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ
DIPLOMA IN GENERAL NURSING MIDWIFERY (GNM)
DIPLOMA IN HEALTH INSPECTOR (DHI), DIPLOMA IN LAB TECHNOLOGY (DMLT)
DIPLOMA IN OPERATION THEATRE TECHNOLOGY (DOT)

ಜಿ.ಎನ್.ಎಂ., ಲ್ಯಾಬ್, ಹೆಲ್ತ್, ಓ.ಟಿ.,
ಪ್ರವೇಶಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
8217587648, 9845576683


# ಕೊರೊನಾ ನಡುವೆಯೂ ಸ್ವಾತಂತ್ರ್ಯ ಸಂಭ್ರಮ



ದೆಹಲಿಯ ಕೆಂಪು ಕೋಟೆಯ ಮೇಲೆ ನಡೆದ ಸ್ವಾತಂತ್ರ್ಯೋತ್ಸವವನ್ನು ಉದ್ದೇಶಿಸಿ ಮಾತನಾಡುತ್ತಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ



ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಕವಾಯತು ಪರಿವೀಕ್ಷಣೆ ನಡೆಸಿದರು.

### ಬಿಕೋ ಎನ್ನುತ್ತಿದ್ದ ಕ್ರೀಡಾಂಗಣ

ಧ್ವಜಾರೋಹಣದ ದಿನ ಸದಾ ಮಕ್ಕಳು, ಪೋಷಕರು, ಸಾರ್ವಜನಿಕರಿಂದ ತುಂಬಿರುತ್ತಿದ್ದ ಜಿಲ್ಲಾ ಕ್ರೀಡಾಂಗಣ ಇಂದು ಬಿಕೋ ಎನ್ನುತ್ತಿತ್ತು. ಜನಪ್ರತಿನಿಧಿಗಳು, ಅಧಿಕಾರಿ, ಸಿಬ್ಬಂದಿಗಳು, ಸನ್ಮಾನಿತರು ಹಾಗೂ ಕುಟುಂಬ ಹೊರತುಪಡಿಸಿದರೆ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಇರಲಿಲ್ಲ. ಪ್ರತಿ ವರ್ಷ ಕಾಣುತ್ತಿದ್ದ ಸಂಭ್ರಮ ಈ ವರ್ಷ ಕಾಣದಾಗಿತ್ತು. ಕ್ರೀಡಾಂಗಣದದ ಪ್ರವೇಶ ದ್ವಾರದಲ್ಲಿ ತಪಾಸಣೆ ಮಾಡಿ ಒಳ ಬಿಡಲಾಗುತ್ತಿತ್ತು. ಆದರೆ ಜಿಲ್ಲೆಯಲ್ಲಿ ಕೊರೊನಾ ಹೆಚ್ಚಾಗುತ್ತಿದ್ದರೂ, ಯಾರಿಗೂ ತಾಪಮಾನ ಪರೀಕ್ಷೆ ಮಾಡಲಿಲ್ಲ. ಸ್ಯಾನಿಟೈಸರ್ ಹಾಕಲಿಲ್ಲ.
ಕೊರೊನಾ ವಾರಿಯರ್ಸ್‌ಗೆ ಸನ್ಮಾನ ಮಾಡಲಾಗುವುದು ಎಂದು ಹೇಳಲಾಗಿತ್ತಾದರೂ, ಪ್ರಶಂಸನಾ ಪತ್ರ ಮಾತ್ರ ವಿತರಿಸಲಾಯಿತು.

## 'ಸ್ವಾತಂತ್ರ್ಯ'ದಲ್ಲಿ ಆತ್ಮನಿರ್ಭರ್ ದಿವ್ಯ ಮಂತ್ರ

### ಅತ್ಯುತ್ತಮ ಉತ್ಪನ್ನಗಳಿಂದ ಶ್ರೇಷ್ಠ ಭಾರತಕ್ಕೆ ಪ್ರಧಾನಿ ಮೋದಿ ಕರೆ

ನವದೆಹಲಿ, ಆ. 15 - ಕೆಂಪು ಕೋಟೆಯ ಮೇಲೆ ನೆರವೇರಿದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಆತ್ಮ ನಿರ್ಭರ್ ಭಾರತಕ್ಕೆ ಅತಿ ಹೆಚ್ಚಿನ ಆದ್ಯತೆ ನೀಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸ್ವಾವಲಂಬನೆಯ ಕಡೆಗಿನ ಭಾರತದ ನಡಿಗೆಯನ್ನು ಕೊರೊನಾ ನಿಲ್ಲಿಸಲಾಗದು ಎಂದಿದ್ದಾರೆ.

ಸತತ ಏಳನೇ ಬಾರಿಗೆ ಸ್ವಾತಂತ್ರ್ಯೋತ್ಸವ ಭಾಷಣ ಮಾಡಿರುವ ಅವರು, ಭಾರತದ ಸಾರ್ವಭೌಮತಕ್ಕೆ ಸವಾಲೆಸೆಯುವವರಿಗೆ ಅವರದೇ ಭಾಷೆಯಲ್ಲಿ ಉತ್ತರಿಸಲಾಗುವುದು ಎಂದಿದ್ದಾರೆ.

ಡಿಜಿಟಲ್ ಆರೋಗ್ಯ ಮಿಷನ್‌ಗೆ ಚಾಲನೆ, (5ನೇ ಪುಟಕ್ಕೆ)

#### ಡಿಜಿಟಲ್ ಹೆಲ್ತ್ ಮಿಷನ್‌ಗೆ ಚಾಲನೆ

ರಾಷ್ಟ್ರೀಯ ಡಿಜಿಟಲ್ ಹೆಲ್ತ್ ಮಿಷನ್ ಆರಂಭಿಸುವುದಾಗಿ ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಮೂಲಕ ಪ್ರತಿಯೊಬ್ಬ ವ್ಯಕ್ತಿಗೂ ಆರೋಗ್ಯದ ಗುರುತಿನ ಸಂಖ್ಯೆ ನೀಡಲಾಗುವುದು. ಇದರಲ್ಲಿ ವ್ಯಕ್ತಿಯ ಆರೋಗ್ಯ ದಾಖಲೆಗಳಿರಲಿವೆ ಎಂದು ಹೇಳಿದ್ದಾರೆ. ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್‌ಗೆ ಶನಿವಾರ ಚಾಲನೆ ನೀಡಲಾಗಿದೆ. ಇದು ಆರೋಗ್ಯ ವಲಯದಲ್ಲಿ ದೊಡ್ಡ ಕ್ರಾಂತಿ ತರಲಿದೆ. ಇದರಿಂದಾಗಿ ಜನರ ಪ್ರತಿಯೊಂದು ಪರೀಕ್ಷೆ, ರೋಗ ಹಾಗೂ ಚಿಕಿತ್ಸೆಯ ವರದಿಗಳು ಒಂದೇ ಗುರುತಿನ ಸಂಖ್ಯೆ ಮೂಲಕ ಲಭ್ಯವಿರಲಿವೆ ಎಂದವರು ತಿಳಿಸಿದ್ದಾರೆ.

## ಜಿಲ್ಲಾಭಿವೃದ್ಧಿಗೆ ಎಲ್ಲರೂ ಕಟಿಬದ್ಧರಾಗೋಣ

### ಜಿಲ್ಲಾ ಕ್ರೀಡಾಂಗಣದಲ್ಲಿ ಎಪ್ಪನಾಲ್ಕನೇ ಸ್ವಾತಂತ್ರ್ಯೋತ್ಸವ ಆಚರಣೆ

ದಾವಣಗೆರೆ, ಆ. 15- ಸರ್ಕಾರದ ಪ್ರಮುಖ ಯೋಜನೆಗಳ ಅನುಷ್ಠಾನದಲ್ಲಿ ಸುಧಾರಣೆ ತಂದು ಅವುಗಳ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಈಡೇರಿಸಿ ನಮ್ಮ ಸುತ್ತಮುತ್ತಲಿನ ಸಮಾಜ ಹಾಗೂ ರಾಷ್ಟ್ರವನ್ನು ಬಲಿಷ್ಠಗೊಲಿಸುವ ನಿಟ್ಟಿನಲ್ಲಿ ನಮ್ಮ ಪಾಲಿನ ಕರ್ತವ್ಯವನ್ನು ಜವಾಬ್ದಾರಿ ಯಿಂದ ನಿಭಾಯಿಸಿ ಸ್ವಾತಂತ್ರ್ಯದ ಸಿಹಿಯನ್ನು ಸಾಮರಸ್ಯದಿಂದ ಸವಿಯೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ್ ಕರೆ ನೀಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ 74ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ (4ನೇ ಪುಟಕ್ಕೆ)

#### ದಿನ 3 ಸಾವಿರ ಕೊರೊನಾ ಟೆಸ್ಟ್ ಗುರಿ

ದಾವಣಗೆರೆ, ಆ. 15- ಪ್ರತಿ ದಿನ 3 ಸಾವಿರ ಕೊರೊನಾ ಟೆಸ್ಟ್ ಮಾಡುವ ಗುರಿಯನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ್ ಹೇಳಿದರು. ಧ್ವಜಾರೋಹಣ ಕಾರ್ಯಕ್ರಮದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವಿನ ಸಂಖ್ಯೆ ಹೆಚ್ಚಾಗುತ್ತಿದ್ದು, ಕಳವಳವೂ ಹೆಚ್ಚಾಗಿದೆ. ಎಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆಯೋ ಅಲ್ಲಿ ಹೆಚ್ಚು ಪರೀಕ್ಷೆ ನಡೆಸಿ, ಸಾರ್ವಜನಿಕರ ಪ್ರಾಣ ಉಳಿಸುವ ಕೆಲಸ ಮಾಡುಂತೆ ಅಧಿಕಾರಿಗಳಿಗೆ (4ನೇ ಪುಟಕ್ಕೆ)




## ಕೊರೊನಾ ವಿರುದ್ಧ ಹೋರಾಡುತ್ತಾ ಕಲ್ಯಾಣ ರಾಜ್ಯ

### ಸ್ವಾತಂತ್ರ್ಯ ಸಮಾರಂಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಬದ್ಧತೆ

ಬೆಂಗಳೂರು, ಆ. 15 - ಜನರು ಕೊರೊನಾ ಸೋಂಕಿಗೆ ಹೆದರಬಾರದು ಎಂದು ಕರೆ ನೀಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವೈರಸ್ ಸೋಂಕಿನ ವಿರುದ್ಧ ಹೋರಾಡುತ್ತಲೇ ಕಲ್ಯಾಣ ರಾಜ್ಯ ನಿರ್ಮಾಣ ನಮ್ಮ ಏಕೈಕ ಗುರಿ ಎಂದು ತಿಳಿಸಿದ್ದಾರೆ. 74 ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸುವ ಸಂದರ್ಭದಲ್ಲಿ ಜನತೆಗೆ ಸಂದೇಶ ನೀಡಿರುವ ಮುಖ್ಯಮಂತ್ರಿ, (4ನೇ ಪುಟಕ್ಕೆ)

## ಜಿಲ್ಲೆಯಲ್ಲಿ 327 ದೃಢ, 5 ಸಾವು, 267 ಬಿಡುಗಡೆ



ದಾವಣಗೆರೆ, ಆ. 15- ಜಿಲ್ಲೆಯಲ್ಲಿ ಶನಿವಾರ 327 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ವರದಿಯಾಗಿದೆ. ಐವರು ಸಾವನ್ನ ಪ್ಪಿದ್ದು, 267 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

ಇಲ್ಲಿಯವರೆಗೆ ಜಿಲ್ಲೆಯಲ್ಲಿ 5070 ಜನರಲ್ಲಿ ಸೋಂಕು ಕಾಣಿಸಿದ್ದು, 3421 ಜನರು ಬಿಡುಗಡೆಯಾಗಿದ್ದಾರೆ. ಒಟ್ಟು 1523 ಸಕ್ರಿಯ ಪ್ರಕರಣಗಳಿವೆ. ದಾವಣಗೆರೆ ತಾಲ್ಲೂಕಿನ 182, ಹರಿಹರ 73, ಜಗಳೂರು 7, ಚನ್ನಗಿರಿ 26, ಹೊನ್ನಾಳಿ 26 ಹಾಗೂ ಹೊರ ಜಿಲ್ಲೆಯ 13 ಜನರಲ್ಲಿ ಸೋಂಕು ದೃಢಪಟ್ಟಿದೆ.

ದಾವಣಗೆರೆಯ ವಿಜಯ ನಗರ 1ನೇ ಮೇನ್ 7ನೇ ಕ್ರಾಸ್ 60ರ ಮಹಿಳೆ, ಎಂ.ಸಿ.ಸಿ. ಬಿ ಬ್ಲಾಕ್ 23ರ ಮಹಿಳೆ, ದೊಡ್ಡಬಾತಿಯ 34ರ ಮಹಿಳೆ, ಜೆ.ಹೆಚ್. ಪಟೇಲ್ ಬಡಾವಣೆ 69ರ ಪುರುಷ, ವಿನೋಬನಗರ 8ನೇ ಕ್ರಾಸ್ 60ರ ಮಹಿಳೆ, ಬಂಬೂ ಬಜಾರ್ 50ರ ಪುರುಷ, (6ನೇ ಪುಟಕ್ಕೆ)


## ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಧೋನಿ

### ಐಪಿಎಲ್ ಪಂದ್ಯಾವಳಿಯಲ್ಲಿ ಮುಂದುವರಿಕೆ



ನವದೆಹಲಿ, ಆ. 15 – ಎರಡು ಬಾರಿ ಕ್ರಿಕೆಟ್ ವಿಶ್ವಕಪ್ ವಿಜೇತ ತಂಡದ ನಾಯಕರಾಗಿದ್ದ ಮಹೇಂದ್ರ ಸಿಂಗ್ ಧೋನಿ, ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿಯಾಗುವುದಾಗಿ ಘೋಷಿಸಿದ್ದಾರೆ. ಕಳೆದ ಒಂದು ವರ್ಷದಿಂದ ಅವರ ಮುಂದುವರಿಕೆಯ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇದ್ದವು.

39 ವರ್ಷದ ಧೋನಿ ಈ ವರ್ಷದ ಐ.ಪಿ.ಎಲ್. ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸೆಪ್ಟೆಂಬರ್ 19ರಿಂದ ಯುಎಇನಲ್ಲಿ ಪಂದ್ಯಾವಳಿ ನಡೆಯಲಿದೆ. ಕೊರೊನಾ ಹಿನ್ನೆಲೆಯಲ್ಲಿ (5ನೇ ಪುಟಕ್ಕೆ)

ಗೌತಮ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ
ರೈತರ ಬೀದಿ, ದಾವಣಗೆರೆ.

ಸಾರ್ವಜನಿಕ ಸಂಪರ್ಕ ಅಧಿಕಾರಿ (PRO) ಬೇಕಾಗಿದ್ದಾರೆ

ನಮ್ಮ ಸೊಸೈಟಿಯಲ್ಲಿ ಆಸಕ್ತಿಯುಳ್ಳ ಯುವ ಪದವೀಧರರು ಪ್ರಾಮಾಣಿಕವಾಗಿ ಸೊಸೈಟಿಯ ದೈನಂದಿನ ಕೆಲಸಗಳನ್ನು ಈಗಿರುವ ಸಿಬ್ಬಂದಿಯ ಜೊತೆಗೆ ಹೊಂದಿಕೊಂಡು ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. B.Com ಪದವಿಯ ಜೊತೆಗೆ ಕಂಪ್ಯೂಟರ್ ಜ್ಞಾನವಿರುವವರಿಗೆ ಆದ್ಯತೆ ನೀಡಲಾಗುವುದು. ಸಂದರ್ಶನಕ್ಕಾಗಿ ಸಂಪರ್ಕಿಸಿ :

♦ 9449163356 ♦ 984477331 ♦ 9886201014 ♦ 9108953018

ವ್ಯವಸ್ಥಾಪಕರು, ಗೌತಮ್ ಕೋ-ಆಪರೇಟಿವ್ ಸೊಸೈಟಿ, ದಾವಣಗೆರೆ.

ಎನ್.ಜಿ.ಪಿ.-75, ಶುಭಾಶಯಗಳು



ದಾವಣಗೆರೆಯ ಹಿರಿಯ ರೈತ ಮುಖಂಡರು, ಜನಾನುರಾಗಿಗಳು, ದೇಶದ ಹಿತ ಚಿಂತಕರು, ಸರ್ವಪಕ್ಷ ಸಮನ್ವಯದ ನೇತಾರರು ಆದ
ಶ್ರೀ ಎನ್.ಜಿ. ಪುಟ್ಟಸ್ವಾಮಿ ಅವರು
ಶನಿವಾರ 74 ತುಂಬಿ 75 ನೇ ಜನ್ಮದಿನಕ್ಕೆ ಪಾದಾರ್ಪಣೆ ಮಾಡಿದ್ದಾರೆ. ನಮ್ಮ ಸ್ನೇಹಿತರೂ, ಹಿತೈಷಿಗಳೂ ಆದ ಪುಟ್ಟಸ್ವಾಮಿಯವರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.

✦ ಬಿ.ಪಿ. ಹರೀಶ್ ✦ ದೇವರ ಮನೆ ಶಿವಕುಮಾರ್ ✦ ಎಂ.ಡಿ. ರವಿ
✦ ಕೇಶವಗೌಡ ✦ ಕೆ.ಚಂದ್ರಪ್ಪ ✦ ಜಗದೀಶ್ ✦ ಮಾಲತೇಶ್
✦ ಹೆಚ್.ಆರ್. ಲಿಂಗರಾಜ್ ✦ ಬಾದಿಹಾಳ್ ಪ್ರಕಾಶ್ ✦ ಬಿ. ಗಂಗಾಧರ್
✦ ಅರುಣ್‌ನಾಯಕ್ ಮತ್ತು ಪುಟ್ಟಸ್ವಾಮಿಯವರ ಸ್ನೇಹ ಬಳಗ, ದಾವಣಗೆರೆ.

ಶಿವ ಸಹಕಾರಿ ಬ್ಯಾಂಕ್ ನಿಯಮಿತ
ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ.

ಸಾಲದ ಮೇಲಿನ ಬಡ್ಡಿ ದರದಲ್ಲಿ ಭಾರೀ ಇಳಿಕೆ

✦ ಗೃಹ ನಿರ್ಮಾಣ ಸಾಲ – 8.75%*
✦ ಚಿನ್ನಾಭರಣ ಸಾಲ – 9.00%
✦ ವಾಹನ ಸಾಲ – (ಕಾರುಗಳಿಗೆ) – 9.75%*

ನಾಡಿನ ಸಮಸ್ತ ಜನತೆಗೂ 74ನೇ ಸ್ವಾತಂತ್ರ್ಯೋತ್ಸದ ಶುಭಾಶಯ ಕೋರುತ್ತ, ನಮ್ಮ ಬ್ಯಾಂಕು 46ನೇ ವರ್ಷ ಪೂರೈಸಿ, 47ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಶುಭ ಸಂದರ್ಭದಲ್ಲಿ, ಬ್ಯಾಂಕಿನ ಸರ್ವ ಸದಸ್ಯರಿಗೂ ಹಾಗೂ ಗ್ರಾಹಕರಿಗೂ ಶುಭಕೋರಿ ಬ್ಯಾಂಕಿನ ಗ್ರಾಹಕರಿಗೆ ಅನುಕೂಲ ಮಾಡುವ ಉದ್ದೇಶದಿಂದ ಮೇಲಿನಂತೆ ಬಡ್ಡಿ ದರಗಳನ್ನು ಭಾರಿ ಕಡಿತಗೊಳಿಸಿ ಪರಿಷ್ಕರಿಸಲಾಗಿದೆ. ಮಾನ್ಯ ಸದಸ್ಯ ಗ್ರಾಹಕರು ಈ ಯೋಜನೆಯ ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

* ಷರತ್ತುಗಳು ಅನ್ವಯ

ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 02.02.1955 ನಿಧನ : 09.08.2020

॥ ಶ್ರೀ ಬಾಲಾಜಿ ಪ್ರಸನ್ನ ॥ ॥ ಶ್ರೀ ಸೇವಾಲಾಲ್ ಪ್ರಸನ್ನ ॥
ಶ್ರೀಮತಿ ಸೀತಾಬಾಯಿ ಮತ್ತು ಮಕ್ಕಳು
ಹೆಚ್.ಕಲಪನಹಳ್ಳಿ, ದಾವಣಗೆರೆ ತಾ॥, ಜಿ॥.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 09.08.2020ರ ಭಾನುವಾರ ಮಧ್ಯಾಹ್ನ ನನ್ನ ಪೂಜ್ಯ ಪತಿಯವರಾದ
ಶ್ರೀ ಶಂಕರ್‌ನಾಯ್ಕ
ನಿವೃತ್ತ ಪ್ರಾಂಶುಪಾಲರು
ಇವರು ವೈಕುಂಠ ವಾಸಿಯಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ವೈಕುಂಠ ಸಮಾರಾಧನೆಯನ್ನು ದಿನಾಂಕ 17.08.2020ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಆವರಗೆರೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು, ಮೃತರ ಧರ್ಮಪತ್ನಿ ಶ್ರೀಮತಿ ಸೀತಾಬಾಯಿ ಮತ್ತು ಮಕ್ಕಳು, ಸಹೋದದರು, ಸಹೋದರಿಯರು ಹಾಗೂ ಹೊನ್ನಾಳಿ ವಂಶಸ್ಥರು ಮತ್ತು ಬಂಧು-ಮಿತ್ರರು.

ವಿಳಾಸ : 'ಶ್ರೀ ಬಾಲಾಜಿ' ನಿಲಯ, # 393/ಸಿ-102, ಶಿಕ್ಷಕರ ಬಡಾವಣೆ, ಮೊದಲನೇ ಹಂತ, ಆವರಗೆರೆ, ದಾವಣಗೆರೆ. ಮೊ. : 98303 30372, 97397 39358

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ರೇವಣಸಿದ್ದೇಶ್ವರ ಪ್ರಸನ್ನ ॥
ದಾವಣಗೆರೆ ಸಿಟಿ ವಿನಾಯಕ ನಗರ, ವಾಸಿ
ಶ್ರೀಮತಿ ಲಕ್ಕಮ್ಮ ಶ್ರೀ ದಿ॥ ಸಿದ್ದಪ್ಪ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 09-08-2020ನೇ ಭಾನುವಾರ ಬೆಳಿಗ್ಗೆ ನನ್ನ ಮಗನಾದ
ಶ್ರೀ ಎಸ್.ಗಂಗಪ್ಪ ನವರು
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 17.08.2020ನೇ ಸೋಮವಾರ ಬೆಳಿಗ್ಗೆ 09-00 ರಿಂದ 10-30ಕ್ಕೆ ಮೃತರ ಸ್ವಗೃಹ, 2ನೇ ಕ್ರಾಸ್, ವಿನಾಯಕ ನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೊರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಶ್ರೀಮತಿ ಮಹಾಲಕ್ಷ್ಮಿ ಮತ್ತು ಮಕ್ಕಳು
ಸಹೋದರರು, ಸಹೋದರಿಯರು ಹಾಗೂ ಬಂಧು – ಮಿತ್ರರು.
ಶ್ರೀ ರೇವಣಸಿದ್ದೇಶ್ವರ ಟ್ರ್ಯಾಕ್ಟರ್ ಗ್ಯಾರೇಜ್
ಪೂಜಾ ಹೋಟೆಲ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ.
ಮೊ: 98440 79147, 99805 32839

## ಎಳೆಹೊಳೆ : ಶ್ರೀ ಬೀರಲಿಂಗೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಚಾಲನೆ



ಮಲೇಬೆನ್ನೂರು, ಆ.15- ಎಳೆಹೊಳೆ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ನೂತನ ಕಟ್ಟಡ ನಿರ್ಮಾಣಕ್ಕೆ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ನಿನ್ನೆ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು. ಜಿ.ಪಂ.ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ರುದ್ರಪ್ಪ, ಗ್ರಾಮದ ಬಿ.ಕೊಟ್ರಪ್ಪ, ಹೆಚ್.ಲಿಂಗರಾಜ್, ಕೆ.ಎಂ.ಹಾಲಸ್ವಾಮಿ, ಷಣ್ಮುಖಪ್ಪ ಪಾಟೀಲ್, ಈರಣ್ಣ ಅಂಗಡಿ, ಕೆ.ಎಂ. ರಾಜಶೇಖರಯ್ಯ, ಹರಿಹರದ ಚೂರಿ ಜಗದೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಹೊನ್ನಾಳಿಯ ವಿವೇಕಾನಂದ ಪ್ರೌಢಶಾಲೆಗೆ ಶೇ. 100 ಫಲಿತಾಂಶ



ಹೊನ್ನಾಳಿ, ಆ.15- ಪಟ್ಟಣದ ದುರ್ಗಿಗುಡಿ 5ನೇ ಕ್ರಾಸ್‌ನಲ್ಲಿರುವ ಸ್ವಾಮಿ ವಿವೇಕಾನಂದ ಮೆಮೋರಿಯಲ್ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಲಭಿಸಿದೆ.

ಕಳೆದ 5 ವರ್ಷಗಳಿಂದ ನಿರಂತರವಾಗಿ ಫಲಿತಾಂಶ ಲಭಿಸಿದೆ. ಒಟ್ಟು 24 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ವಿಶಿಷ್ಟ ದರ್ಜೆ 7, ಪ್ರಥಮ 13 ಹಾಗೂ ದ್ವಿತೀಯ ದರ್ಜೆಯಲ್ಲಿ 4 ವಿದ್ಯಾರ್ಥಿಗಳು ತೇರ್ಗಡೆಯಾಗಿದೆ.

ಬಿ.ಜಿ. ಕಾವ್ಯಶ್ರೀ 610 (97.61) ಅಂಕಗಳನ್ನು ಗಳಿಸಿದ್ದು, ಕನ್ನಡ 124, ಇಂಗ್ಲೀಷ್ 98, ಹಿಂದಿ 97, ಗಣಿತ 93, ವಿಜ್ಞಾನ 98 ಹಾಗೂ ಸಮಾಜ ವಿಜ್ಞಾನದಲ್ಲಿ 100 ಕ್ಕೆ 100 ಗಳಿಸಿದ್ದಾರೆ. ಕೆ.ಆರ್. ಭಾನುಶ್ರೀ 564 (90.4) ಅಂಕಗಳನ್ನು ಪಡೆದಿದ್ದು, ಕನ್ನಡ 119, ಇಂಗ್ಲೀಷ್ 91, ಹಿಂದಿ 98, ಗಣಿತ 73, ವಿಜ್ಞಾನ 85, ಸಮಾಜ ವಿಜ್ಞಾನದಲ್ಲಿ 99 ಅಂಕಗಳನ್ನು ಗಳಿಸಿದ್ದಾರೆ.

ಜಿ.ಎಸ್. ಲಕ್ಷ್ಮೀ 550 (ಶೇ.88) ಅಂಕಗಳನ್ನು ಗಳಿಸಿದ್ದು, ಕನ್ನಡದಲ್ಲಿ 124, ಇಂಗ್ಲೀಷ್ 94, ಹಿಂದಿ 83, ಗಣಿತ 73, ವಿಜ್ಞಾನ 80 ಹಾಗೂ ಸಮಾಜ ವಿಜ್ಞಾನದಲ್ಲಿ 84 ಗಳಿಸಿದ್ದಾಳೆ.

## ರೇಣುಕಾಚಾರ್ಯ ಮೂರ್ತಿಗೆ ಶಿಲಾನ್ಯಾಸ



ಬಾಳೆಹೊನ್ನೂರು, ಆ.15- ಶ್ರೀ ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ 51 ಅಡಿ ಎತ್ತರದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂರ್ತಿ ನಿರ್ಮಾಣದ ಶಿಲಾನ್ಯಾಸ ಕಾರ್ಯಕ್ರಮವು ನಾಡಿದ್ದು ದಿನಾಂಕ 17 ರ ಸೋಮವಾರ ಬೆಳಿಗ್ಗೆ 11.30 ಕ್ಕೆ ಜರುಗಲಿದೆ. ಶ್ರೀ ರಂಭಾಪುರಿ ಡಾ. ವೀರ ಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆಯುವ ಸರಳ ಸಮಾರಂಭದಲ್ಲಿ ಮುಜರಾಯಿ ಖಾತೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಶಿಲಾನ್ಯಾಸ ನೆರವೇರಿಸುವರು. ಸಚಿವ ಸಿ.ಟಿ. ರವಿ ವಾರ್ತಾ ಸಂಕಲನ ಬಿಡುಗಡೆ ಮಾಡುವರು.

# ಕಂದಗಲ್ಲು ಗ್ರಾಮದಲ್ಲೊಂದು 'ಪಂಚವಟಿ'

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

'ಪಂಚವಟಿ' ಈ ಹೆಸರನ್ನು ಬಹುಜನರು ಕೇಳಿರಬಹುದು. ಮಹಾಭಾರತ, ರಾಮಾಯಣದ ಪುರಾಣ ಪುಣ್ಯ ಕಥೆಗಳಲ್ಲಿ ಈ ಹೆಸರಿನ ಪ್ರಸ್ತಾಪವಿದೆ.

ಋಷಿ ಮುನಿಗಳು ಹೆಚ್ಚಿನ ದಿನಗಳ ಕಾಲ ನೀರು, ಆಹಾರವಿಲ್ಲದೆ ತಪಸ್ಸು ಮಾಡುತ್ತಿದ್ದುದು ಈ ಪಂಚವಟಿ ವನದ ಮಧ್ಯಭಾಗದಲ್ಲಿಯೇ. ತಪ್ಪಸ್ಸಿನ ವೇಳೆ ಋಷಿ ಮುನಿಗಳಿಗೆ ನೀರು-ಆಹಾರದ ಶಕ್ತಿ ತುಂಬುತ್ತಿದ್ದುದೂ ಸಹ ಈ ಪಂಚ ವೃಕ್ಷಗಳು ಎಂದು ಹೇಳಲಾಗುತ್ತದೆ.

ವೈಜ್ಞಾನಿಕ ದೃಷ್ಟಿಯಲ್ಲಿ ನೋಡಿದಾಗ ಪಂಚವಟಿ ವನದಲ್ಲಿ ಕಂಡು ಬರುವ ಬಿಲ್ವ, ಆಲ, ಹತ್ತಿ, ಅರಳಿ ಹಾಗೂ ಬನ್ನಿ ಮರಗಳು ಅತಿ ಹೆಚ್ಚು ಆಕ್ಸಿಜನ್ ನೀಡುತ್ತವೆ.

ಭೂಮಿಯ ಮೇಲೆ ಸುಮಾರು ಹತ್ತು ಮರಗಳು ಹೆಚ್ಚಿನ ಆಕ್ಸಿಜನ್ ಒದಗಿಸುತ್ತವೆ. ಅದರಲ್ಲಿ ಈ ಐದು ವೃಕ್ಷಗಳು ಅತಿ ಹೆಚ್ಚಿನ ಆಕ್ಸಿಜನ್ ನೀಡುತ್ತವೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟ ವಿಷಯ. ಅಲ್ಲದೆ ಮೋಡಗಳನ್ನು ಆಕರ್ಷಿಸಿ ಮಳೆ ತರಿಸುವ ಶಕ್ತಿ ಈ ಪಂಚವಟಿ ವನಕ್ಕಿದೆ.

ಕಂದಗಲ್ಲು ಗ್ರಾಮದ ಪ್ರಗತಿ ಪರ ರೈತ ಕೆ.ಜಿ. ಈಶ್ವರಪ್ಪ ಅವರು, ಇದೀಗ ತಮ್ಮ ನಿವಾಸಕ್ಕೆ ಸನಿಹ ದೂರದಲ್ಲಿನ ಕೃಷಿ ಭೂಮಿಯಲ್ಲಿ ಈ 'ಪಂಚವಟಿ' ನಿರ್ಮಿಸಿ ರಾಜ್ಯದ ಗಮನ ಸೆಳೆದಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಅನೇಕರನ್ನು ಭೇಟಿ ಮಾಡಲು ಸಾಧ್ಯವಾಗದಿದ್ದರೂ, ಕಳೆದ ಆರೇಳು ತಿಂಗಳಿನಿಂದ ಪಂಚ ಸಸಿಗಳಾಗಿ ಹುಡುಕಾಡಿ ಸಂಗ್ರಹಿಸಿದ್ದಾರೆ.

ಇವರ ಪಂಚವಟಿ ಸ್ಥಾಪನೆಗೆ ಖ್ಯಾತ ಪ್ರಾಧ್ಯಾಪಕ ಡಾ.ಸೆಲ್ವಪಿಳ್ಳೈ ಐಯ್ಯಂಗಾರ್ ಅವರು, ವಾರಣಾಸಿ ಮತ್ತು ಪಶ್ಚಿಮ ಬಂಗಾಳದಲ್ಲಿ ತಮಗೆ ಪರಿಚಯ ಇರುವ ಸ್ನೇಹಿತರೊಂದಿಗೆ ಚರ್ಚಿಸಿ ಯಾವ ಸಸಿ ಯಾವ ದಿಕ್ಕಿನಲ್ಲಿ ನೆಡಬೇಕೆಂಬ ಬಗ್ಗೆ ಸಲಹೆ, ಸೂಚನೆ ನೀಡಿದ್ದಾರೆ.

ಮತ್ತೋರ್ವ ಸ್ನೇಹಿತರಾದ ಬೆಳಗಾವಿಯ ಅಭಯ್ ಮುತಾಲಿಕ್ ಅವರು ಬ್ರಹ್ಮಪುರಾಣದಲ್ಲಿ ಪಂಚವಟಿ ಬಗ್ಗೆ ಉಲ್ಲೇಖವಾಗಿರುವ ಬಹಳಷ್ಟು ವಿಷಯ ಗ್ರಹಿಸಿಕೊಂಡು ಸಸಿ ನೆಡಬೇಕಾದ ದೂರವನ್ನು ನಿಖರವಾಗಿ ತಿಳಿಸಿದ್ದಾರೆ. ಅಲ್ಲದೆ ಪ್ರದೀಪ್ ತಾಪಸ್ವಿ ಅವರೂ ಸಹ ಅನೇಕ ಸಲಹೆಗಳನ್ನು ನೀಡಿದ್ದಾಗಿ ಈಶ್ವರಪ್ಪ (5ನೇ ಪುಟಕ್ಕೆ)

### ಏನಿದು ಪಂಚವಟಿ?

ಐದು ಪವಿತ್ರ ವೃಕ್ಷಗಳು, ಐದು ನಿರ್ದಿಷ್ಟ ದೂರ ಹಾಗೂ ನಿರ್ದಿಷ್ಟ ದಿಕ್ಕಿನಲ್ಲಿರುವ ಪ್ರದೇಶವೇ ಪಂಚವಟಿ.

ದೇವರು ಎಂದು ಪೂಜಿಸಲ್ಪಡುವ ಬಿಲ್ವಪತ್ರೆ, ಬನ್ನಿ, ಬೇವು, ಅರಳಿ ಮತ್ತು ಅತ್ತಿ ಸೇರಿ ಐದು ಗಿಡಗಳ ಈ ಪಂಚವಟಿಗೆ ಜನ ಹಿತಕಾರಿ, ಪರಿಸರ ಮಾಲಿನ್ಯವನ್ನು ನಿವಾರಣೆ ಮಾಡುವ, ಹೆಚ್ಚು ಆಮ್ಲಜನಕ ಉತ್ಪಾದಿಸುವ ಹಾಗೂ ಮಾನವನ ರೋಗಗಳನ್ನು ಗುಣಪಡಿಸುವ ಶ್ರೇಷ್ಠ ಶಕ್ತಿ ಇರುತ್ತದೆ.

### 18 ವರ್ಷಗಳಿಂದ 'ಅಗ್ನಿ ಹೋತ್ರ'

ಪಂಚವಟಿ ಮೂಲಕ ಗಮನ ಸೆಳೆದಿರುವ ಕೆ.ಜಿ ಈಶ್ವರಪ್ಪ ಕಳೆದ 18 ವರ್ಷದಿಂದಲೂ 'ಅಗ್ನಿಹೋತ್ರ' ನಡೆಸುತ್ತಿರುವುದು ಗಮನಾರ್ಹ. ಪರಿಸರದ ಶುಚಿತ್ವಕ್ಕಾಗಿ, ದೈಹಿಕ, ಮಾನಸಿಕ ರೋಗಗಳಿಗೆ ಮದ್ದಾಗಿ ಅಗ್ನಿ ಹೋತ್ರ ಕಾರ್ಯ ನಿರ್ವಹಿಸು ತ್ತದೆ. ಸೂರ್ಯೋದಯ ಹಾಗೂ ಸೂರ್ಯಾಸ್ತದ ವೇಳೆ ಈ ಅಗ್ನಿಹೋತ್ರ ನಡೆಸಲಾಗುತ್ತಿದೆ.

### ಪೂರ್ವಜರ ಆಚರಣೆಗಳಲ್ಲಿತ್ತು ವಿಜ್ಞಾನ: ಅನಿತಾ

ಈಶ್ವರಪ್ಪನವರ ಪುತ್ರಿ ಅನಿತಾ, ಎಂ.ಟೆಕ್ ಪದವೀಧರೆ. ತಂದೆಯ ಪಂಚವಟಿ ಕನಸಿನ ಬಗ್ಗೆ ಹೆಮ್ಮೆಯಿಂದಲೇ 'ಜನತಾವಾಣಿ' ಯೊಂದಿಗೆ ಅನಿಸಿಕೆ ಹಂಚಿಕೊಂಡರು. ಪೂರ್ವಜರ ಪ್ರತಿ ಆಚರಣೆಗಳಲ್ಲೂ ವಿಜ್ಞಾನವಿತ್ತು. ಅದು ಕೃಷಿಯಲ್ಲಿ ಬಳಕೆಯಾಗುತ್ತಿತ್ತು. ಅದನ್ನು ಈಗ ಮತ್ತಷ್ಟು ಬಳಸಿಕೊಂಡರೆ ಕೃಷಿ ಉತ್ಕೃಷ್ಟ ಮಟ್ಟಕ್ಕೆ ಏರುತ್ತದೆ ಎಂಬುದು ತಂದೆಯ ಬಯಕೆಯಾಗಿದೆ ಒಂದು ಪಂಚವಟಿ ಒಂದು ಎಕರೆ ಕಾಡಿಗೆ ಸಮಾನ. ಈ ಪ್ರದೇಶದ ಸುತ್ತ ನಡೆದಾಡಿದರೂ ಅನೇಕ ಕಾಯಿಲೆಗಳು ವಾಸಿಯಾಗುವ ಸಾಧ್ಯತೆ ಇದೆ ಎಂದರು ಅನಿತಾ.



### ಪಂಚ ವೃಕ್ಷಗಳಲ್ಲಡಗಿದೆ ಶಕ್ತಿ

ಬಿಲ್ವ : ಪತ್ರಿ ಗಿಡದ ಸಂಸ್ಕೃತ ಹೆಸರು ಬಿಲ್ವ. ಬಿಲ್ವಪತ್ರೆಯ ಗಿಡಗಳಲ್ಲಿ ಶಿವನು ನೆಲೆಸಿರುವನೆಂಬ ನಂಬಿಕೆ ಇದೆ. ಎಲೆ, ಕಾಂಡ, ಬೇರು, ತೊಗಟೆ ಮತ್ತು ಹಣ್ಣುಗಳ ಬಳಕೆಯ ಉಪಯೋಗವನ್ನು ಪಡೆಯುತ್ತಾರೆ. ಪಂಚವಟಿ ನಿರ್ಮಾಣದಲ್ಲಿ ಮೊದಲ ಆದ್ಯತೆ ಬಿಲ್ವಕ್ಕಿದೆ.

ಬನ್ನಿ : ಬನ್ನಿ ಗಿಡವನ್ನು ಕಡಿಯುವುದು ಮತ್ತು ಸುಡುವುದು ವಿರಳ. ಪಾಂಡವರು ವನವಾಸದಲ್ಲಿದ್ದಾಗ ತಮ್ಮ ಶಸ್ತ್ರಾಸ್ತ್ರ-ಆಯುಧ ಅವರ ಅಜ್ಞಾತವಾಸ ಮುಗಿಯುವವರೆಗೂ ಈ ಮರದಲ್ಲಿ ಇಟ್ಟಿದ್ದರೆಂದು ಹೇಳಲಾಗುತ್ತದೆ. ಉತ್ತಮ ಆಮ್ಲಜನಿಕ ಕೊಡುವ ಮರಗಳಲ್ಲಿ ಇದೂ ಒಂದು.

ಆಲ: ಆಲದ ಮರದಲ್ಲಿ ಶಿವ ಮತ್ತು ವಿಷ್ಣುವಿನ ಶಕ್ತಿ ಇರುತ್ತದೆ ಎಂದು ನಂಬಲಾಗಿದೆ. ಈ ಮರದಿಂದ ಸಿಗುವ ಸಕಾರಾತ್ಮಕ ಶಕ್ತಿಯು ವ್ಯಕ್ತಿಯಲ್ಲಿ ಇರುವ ಭಯ, ಬೇಸರ, ಅಜ್ಞಾನವನ್ನು ಓಡಿಸುತ್ತದೆ. ಜ್ಞಾನ ಮತ್ತು ಧೈರ್ಯವನ್ನು ತುಂಬಿ ವ್ಯಕ್ತಿಗೆ ಆತ್ಮವಿಶ್ವಾದ ಜೀವನವನ್ನು ಹೊಂದಲು ಸಹಕಾರಿ ಎನ್ನಲಾಗುತ್ತಿದೆ. (5ನೇ ಪುಟಕ್ಕೆ)

### ಹೊಸತನದ ತುಡಿತ ಪಂಚವಟಿಗೆ ಪ್ರೇರಣೆ: ಕೆ.ಜಿ. ಈಶ್ವರಪ್ಪ



ನಾನು ಸಾವಯುವ ಕೃಷಿಕ. ಜೊತೆಗೆ ಸಂಶೋಧನೆಯ ತುಡಿತ ಮೊದಲಿನಿಂದಲೂ ನನ್ನಲ್ಲಿದೆ. ಏನನ್ನಾದರೂ ಹೊಸದನ್ನು ಮಾಡಬೇಕೆಂಬ ಪರಿಕಲ್ಪನೆಯೇ ಪಂಚವಟಿ ವನ ನಿರ್ಮಾಣಕ್ಕೆ ಪ್ರೇರಣೆ.

ಪ್ರಕೃತಿ ನಮಗೆ ನೀಡಿದ್ದರಲ್ಲಿ ಒಂದಿಷ್ಟನ್ನಾದರೂ ಮರಳಿ ಪ್ರಕೃತಿಗೆ ನೀಡಬೇಕೆಂಬ ಉದ್ದೇಶದಿಂದ ಪಂಚವಟಿ ನಿರ್ಮಿಸಲಾಗಿದೆಯೇ ಹೊರತು, ನನ್ನ ವೈಯಕ್ತಿಕ ಲಾಭಕ್ಕಾಗಿ ಅಲ್ಲ.

ನನಗೆ ತಿಳಿದ ಮಟ್ಟಿಗೆ ರಾಜ್ಯದಲ್ಲಿ ಎಲ್ಲಿಯೂ ಪಂಚವಟಿ ಇಲ್ಲ. ಮೇಲುಕೋಟೆಯಲ್ಲಿ ಈ ರೀತಿ ಐದು ವೃಕ್ಷಗಳು ಇವೆ ಎಂದು ಹೇಳಲಾಗುತ್ತಿದೆಯಾದರೂ, ಅದು ಪಂಚವಟಿಯಲ್ಲ.

ಪಂಚವಟಿ ನಿರ್ಮಾಣದ ಬಯಕೆ ಬಂದಾಗ ರಾಜ್ಯದಲ್ಲಿ ಎಲ್ಲಿಯಾದರೂ ಇದ್ದರೆ ಅದನ್ನು ನೋಡಿ ತಿಳಿದುಕೊಳ್ಳಲು ಸಾಕಷ್ಟು ಪ್ರಯತ್ನಿಸಿದೆ. ಆದರೆ ಎಲ್ಲೂ ಸಿಗಲಿಲ್ಲ.

ಪಂಚವಟಿ ವನದಲ್ಲಿನ ಸಸಿಗಳು, ನಿರ್ದಿಷ್ಟ ದೂರ, ದಿಕ್ಕು ಇವೆಲ್ಲವೂ ಬ್ರಾಹ್ಮಣ್ಯದ ವೈಭವೀಕರಣವಲ್ಲ, ಇದು ಕೃಷಿ ವೈಭವೀಕರಣ ಎಂದು ಇದೇ ಸಂದರ್ಭದಲ್ಲಿ ಈಶ್ವರಪ್ಪ ಸ್ಪಷ್ಟಪಡಿಸಿದರು.


# Hearty Congratulations...




## RACHANA . C

**D/o. H.S. Chandrashekhar, Mangala K.S.**

**Hearty congratulations to C. Rachana for getting 96% of marks in 2020 years SSLC exam. She is the student of Maganur Basappa High school, Vidyanagar, Davangere.**

*Best Wishes From :*

- **DR. Rajeev Agarwal,** HOD Nephrology, JJMMC, Dvg.
- **DR. Nagamani Agarwal,** Prof. Pediatrics, JJMMC, Dvg.
- **DR. Pramod G.R.** Asst prof of nephrology, Manglore.
- **DR. Deepti Pramod** MD Medicine Manglore
- **DR. Rajashree.**Prof JJMMC Dvg
- **DR. N.M Dhanya kumar,** Prof. College of dental Science
- **DR. G. Vinay kumar,** Prof. College of dental Science
- **DR. A.M. Shiva kumar,** ENT Specialist, Dvg.
- **DR. Kiran Hegde,** Radiologist, Hegde Diagnostic, Dvg.
- **DR. Rashmi Hegde,** Prof.OBG, SSIMS, Dvg.
- **DR. Ramesh Poojar,** Sri Durga ortho Center
- **DR. Mohan Maralaih,** Director of CHI, JJMMC, Dvg.
- **DR. Deepak Udupudi,** Prof. General Surgery, JJMMC, Dvg.
- **DR. Ramesh,** Prof. Pediatrics, JJMMC, Dvg.
- **DR. Ravikumar** Genral Surgen, Ravi Nursing Home.Dvg
- **Sri Mahadevappa,** Rtd prof DRM College Dvg
- **K. Raghavendra Nayari** State Vice-president of canara bank emplyoes Union
- **B.G Ajay kumar,** Mayor of Davangere Corporation,
- **Nagaraj Lokikere,** President of BJP Jilla Raitha Morcha
- **Anil Kumar Singh,** Sharada Rice Mill
- **Narayana Rajapooth,** Rtd, DYSP
- **Shivaganga Basavaraj,** President, Jilla Kissan Congres
- **Jambigi Radhesh,** President of District tax auditor Association
- **D.K Kumar,** Ex- Corporator
- **P.K Lingaraj,** Ex- Corporator
- **Ramesh Babu,** Ramesh & Co
- **Puttaswami Gowda,** Carrom Club
- **P.Naganaik,** JTO Of Govt ITI Hiriyuru
- **Jolli Guru,** President of Hindu Mahaganapathi Trust, Dvg.
- **Prakash & Family,** News Paper Distributor
- **L.K Rajeev & Family**
- **Ravindranath & Family,** Mangala Traders
- **Mohan Kumar Patil,** Kulambi.
- **Eshwar & Family,** Eshwar furniture, Dvg.
- **Yogesh Pawar,** Druva Sarja Abhimanigala Trust, Dvg.
- **Ganesh,** Sri Muruli Abhimanigala Trust, Dvg.
- **Sathish Rocky Gym,** Dharshan Abhimanigala Trust, Dvg.
- **Smt Rudramma** Late **H.M. Shivalingappa**
- **Smt Manjula Siddalingappa,** Madder.
- **Smt Umadevi** Late **H.S. Rudresh**
- **Smt Geetha H.S. Suresh**
- **Smt Vijayalakshmi** Late **H.S. Mallikarjuna**
- **Smt Meenakshi Sreenivasa**
- **Nijaguna Swami & Family**
- **Anand kundawada & Family**

**Maganur Basappa school All Staffs**



***Special Compliments :***

***AKHILESH C. B/O RACHANA. C, 93418 91072***

## ರಾಶಿ ಭವಿಷ್ಯ

**ದಿನಾಂಕ : 16.08.2020 ರಿಂದ 22.08.2020**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಆರೋಗ್ಯ ವಿಚಾರದಲ್ಲಿ ಸುಧಾರಣೆ ಕಂಡು ಬರಲಿದೆ. ಅದರ ಬಗ್ಗೆ ಚಿಂತೆ ಬೇಡ. ಹಾಗೆಂದ ಮಾತ್ರಕ್ಕೆ ಅಲಕ್ಷೆ ಕೂಡದು. ನಿಮ್ಮ ಸುತ್ತವಿರುವ ಜನರೊಂದಿಗೆ ಅನಾವಶ್ಯಕ ವಾಗ್ವಾದ ಬೇಡ. ಇದು ದ್ವೇಷಕ್ಕೆ ತಿರುಗಬಹುದು. ನ್ಯಾಯಾಲಯ ಸಂಬಂಧ ವ್ಯಾಜ್ಯಗಳಲ್ಲಿ ಅನುಕೂಲ. ವ್ಯವಹಾರಗಳಲ್ಲಿ ಹೆಚ್ಚಿನ ಲಾಭ. ಹಣಕಾಸಿನ ವಿಷಯದಲ್ಲಿ ವಿರೋಧ ಕಟ್ಟಿಕೊಂಡವರು ಅನಿರೀಕ್ಷಿತವಾಗಿ ನಿಲುವು ಬದಲಾಯಿಸಿ, ರಾಜಿ ಪಂಚಾಯ್ತಿಗೆ ಬರುವರು. ವಿದ್ಯಾರ್ಥಿಗಳು ಮುಂದಿನ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸದ ವಿಷಯದ ಆಯ್ಕೆಯಲ್ಲಿ ಗೊಂದಲ ಕ್ಕೊಳಗಾಗುವರು. ಗೋಸೇವೆ ಮಾಡಿ. ಭಾನು, ಸೋಮ, ಮಂಗಳ ಶುಭದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕುಟುಂಬದ ಖರ್ಚು ವೆಚ್ಚಿನ ಬಾಬ್ತು ಕೈ ಮೀರಿ ಹೋಗಲಿದೆ. ಬೇಗ ಕಡಿವಾಣ ಹಾಕದಿದ್ದಲ್ಲಿ ಉಳಿತಾಯ ಕರಗಿ, ಸಾಲದ ಮೊರೆ ಹೋಗಬೇಕಾದೀತು. ಕಠಿಣ ಶ್ರಮ ಪಟ್ಟು ದುಡಿದರೂ ಆದಾಯ ಅಷ್ಟಕಷ್ಟೇ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ. ಮಕ್ಕಳಿಗೆ ಕಷ್ಟದ ಅರಿವಾಗಿ ನಿಮಗೆ ಸಹಾಯ ಮಾಡುವರು. ನಿಮ್ಮ ವ್ಯಕ್ತಿತ್ವಕ್ಕೆ ತಕ್ಕ ಗೌರವ ದೊರೆಯಲಿದೆ. ಮಡದಿಗೆ ತವರು ಮನೆಯಿಂದ ಬರ ಬೇಕಾಗಿದ್ದ ಆಸ್ತಿಪಾಲು ಇಷ್ಟರಲ್ಲೇ ದೊರೆಯಲಿದೆ. ಉಷ್ಣ ಸಂಬಂಧಿ ಮೊದಲಾದ ಆರೋಗ್ಯ ಸಮಸ್ಯೆ ಕಾಡ ಬಹುದು. ವೃತ್ತಿಯಲ್ಲಿದ್ದ ಗೊಂದಲ ಬಗೆಹರಿಯಲಿದೆ. ಸೋಮ, ಗುರು, ಶುಕ್ರ ಶುಭದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಮನೆಯಲ್ಲಿ ಹಿರಿಯರಿಗೆ ಕಾಣಿಸಿಕೊಂಡ ಅನಾರೋಗ್ಯ ಸಮಸ್ಯೆಗೆ ಹೆಚ್ಚಿನ ಖರ್ಚು. ಅವಸರ ಮಾಡಿದ ಕೆಲಸಗಳಿಂದ ಅನೇಕ ಸಮಸ್ಯೆ. ಮಕ್ಕಳಿಗೆ ಜವಾಬ್ದಾರಿಯ ಅರಿವು ಮಾಡಿ ಕೊಡದಿದ್ದಲ್ಲಿ ಆರ್ಥಿಕ ಸಮಸ್ಯೆ ಎದುರಾದೀತು. ಅಮೂಲ್ಯ ವಸ್ತುಗಳನ್ನು ಗಿರವಿ ಇಡಬೇಕಾಗಬಹುದು. ರಾಜಕಾರಣಿಗಳಿಗೆ ತಮ್ಮ ಕ್ಷೇತ್ರಾಭಿವೃದ್ಧಿಗೆ ಅನುದಾನ ಪಡೆಯಲು ಕಷ್ಟವಾಗಲಿದೆ. ದಂಪತಿಗಳ ನಡುವೆ ಭಿನ್ನಾಭಿಪ್ರಾಯ ದೂರವಾಗಿ ಸಾಮರಸ್ಯ ಮೂಡಲಿದೆ. ವೈದ್ಯರಿಗೆ ಹೆಚ್ಚು ಗೌರವ -ಸಂಭಾವನೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯಲಿದೆ. ಔಷಧಿ ವ್ಯಾಪಾರಿಗಳು ಲೆಕ್ಕಪತ್ರ ಸರಿಯಾಗಿ ನಿರ್ವಹಿಸಿ. ಭಾನು, ಬುಧ, ಗುರು ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವ ನಿಮಗೆ ಅಕ್ಕಿಹಿಟ್ಟಿನ ತಿಳಿನೀರು ಕುಡಿಸುವವರ ಬಗ್ಗೆ ಎಚ್ಚರದಿಂದಿರಿ. ಹೂಡಿದ ಬಂಡವಾಳ ಲಾಭ ತರಲು ತುಸು ನಿಧಾನವಾಗಲಿದೆ. ಆಸ್ತಿ ಖರೀದಿಗೆ ಆತುರ ಬೇಡ. ಕುಟುಂಬದ ಸದಸ್ಯರ ಸಮಸ್ಯೆ ಅರಿಯಲು ಯತ್ನಿಸಿ. ಎಲ್ಲವನ್ನೂ ನಿಭಾಯಿಸಬಲ್ಲೆ ಎಂಬ ಅಹಮಿಕೆಯೇ ಶತ್ರುಗಳನ್ನು ಸೃಷ್ಟಿಸಬಹುದು. ಹಿರಿಯರ ಅಣತಿಯಂತೆ ನಡೆದಲ್ಲಿ ಮಾತ್ರ ಬರಬಹುದಾದ ಸಮಸ್ಯೆಗಳು ತುಸು ಕಡಿಮೆಯಾದೀತು. ಆರೋಗ್ಯದ ವಿಚಾರದಲ್ಲಿ ಉದಾಸೀನತೆ ಬೇಡ. ಸೂಕ್ತ ವೈದ್ಯರ ಸಲಹೆಯಂತೆ ನಡೆದುಕೊಳ್ಳಿ. ಸೋಮ, ಬುಧ, ಗುರು ಶುಭದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನಿಮ್ಮ ಕೈಕೆಳಗಿನ ನೌಕರರನ್ನು ಹೇಗೆ ಒಳ್ಳೆತನದಿಂದ ದುಡಿಸಿ ಕೊಳ್ಳಬಹುದು ಎಂಬುದು ತಿಳಿದು ವ್ಯವಹರಿಸಿ. ನಿರಂತರ ಅತಿಥಿಗಳ ಆಗಮನ, ಬಿಡುವಿಲ್ಲದ ಕೆಲಸ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು. ಬೇರೆ ಯವರಿಗೆ ಕೊಟ್ಟ ಹಿಂತಿರುಗದೆ ಪಂಚಾಯ್ತಿಯಿಂದಾಗಿ ಸ್ವಲ್ಪ ಭಾಗ ಮಾತ್ರ ನಿಮ್ಮ ಕೈ ಸೇರಲಿದೆ. ಅನಿರೀಕ್ಷಿತ ಪ್ರಸಂಗದಿಂದಾಗಿ ಕೂಡಿಟ್ಟ ಹಣ ಈಗ ನಿಮ್ಮ ನೆರವಿಗೆ ಬರಲಿದೆ. ಯಾರಿಗೋ ಅನುಕಂಪ ತೋರಲು ಹೋಗಿ, ನೀವು ನಷ್ಟ ಅನುಭವಿಸ ಬೇಕಾಗೀತು. ಆಸ್ತಿ ಹಂಚಿಕೆ ವಿಚಾರದಲ್ಲಿ ಮಧ್ಯಸ್ಥರ ಅಣತಿಯಂತೆ ನಡೆದುಕೊಳ್ಳಿ. ಮೊಣಕಾಲು ನೋವು ಕಂಡು ಬರಲಿದೆ. ಭಾನು, ಮಂಗಳ, ಗುರು ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ತಿಳಿದೋ ತಿಳಿಯದೆಯೋ ಬೇರೆಯವರಿಗೆ ಜಾಮೀನು ಕೊಟ್ಟು ತೊಂದರೆ ಗೊಳಗಾಗಬೇಡಿ. ತಿಳಿಯದಿರುವ ವಿಷಯಗಳ ಬಗ್ಗೆ ಸಲಹೆ-ಸಹಾಯ ಪಡೆಯಿರಿ. ನಿರೀಕ್ಷಿತ ಮೂಲಕ್ಕಿಂತ ಅನಿರೀಕ್ಷಿತ ಮೂಲಗಳಿಂದ ಹರಿದು ಬರುವ ಆರ್ಥಿಕ ನೆರವು ಅಚ್ಚರಿ ತರಲಿದೆ. ಮಗನ ಉದ್ಯೋಗದ ಆಯ್ಕೆಯಲ್ಲಿ ಬದ ಲಾವಣೆ ಕಂಡು ಬರಲಿದ್ದು, ಚಿಂತೆಗೀಡುಮಾಡಲಿದೆ. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಿ. ವಿದ್ಯಾರ್ಥಿಗಳು ಆಯ್ಕೆ ಗೊಂದಲಗಳಿಂದ ತಲೆಬಿಸಿ ಮಾಡಿ ಕೊಳ್ಳುವರು. ಬಂಧುಗಳ ನಡುವೆ ಹಣಕಾಸಿನ ಬಗ್ಗೆ ದೊಡ್ಡ ಚರ್ಚೆಯಾಗಲಿದೆ. ವೃತ್ತಿಯಲ್ಲಿ ಯಶಸ್ಸು. ಕುಲದೇವತಾರಾಧನೆ ಮಾಡಿ. ಭಾನು, ಬುಧ, ಶುಕ್ರ ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅವರಿವರ ಕೆಲಸದ ನೆಪದಲ್ಲಿ ಮಕ್ಕಳ ನಡಾವಳಿ ಗಮನಿಸದೇ ಸಮಸ್ಯೆ ಎದುರಿಸಬೇಕಾಗೀತು. ನೆರವು ನಿಮ್ಮ ಶಕ್ತ್ಯಾನುಸಾರವಾಗಿರಲಿ. ಗಳಿಕೆಯನ್ನು ಉಳಿಸುವ ಪ್ರಯತ್ನ ವ್ಯರ್ಥವಾದೀತು. ಚಾಡಿ ಮಾತುಗಳಿಂದ ದೂರವಿರಿ. ಕರ್ತವ್ಯದಲ್ಲಿ ಲೋಪಗಳನ್ನು ಮೇಲಾಧಿಕಾರಿಗಳ ಸಹಕಾರದಿಂದ ಸರಿಪಡಿಸಿಕೊಳ್ಳಿ. ಅನಿರೀಕ್ಷಿತ ವಾಸ ಸ್ಥಳದಿಂದ ಕೆಲಕಾಲ ದೂರವಿರಬೇಕಾಗಬಹುದು. ಹಿರಿಯ ರೊಂದಿಗೆ ಚರ್ಚೆಯಾಗಲಿ ಅಥವಾ ವಾಗ್ವಾದವಾಗಲಿ ಒಳ್ಳೆಯದಲ್ಲ. ಸರ್ಕಾರದ ನೆರವನ್ನು ನಂಬಿ ಯಾವುದೇ ಯೋಜನೆ ಆರಂಭಿಸಬೇಡಿ. ನವಗ್ರಹಾರಾಧನೆ ಮಾಡಿ, ದಾನ ಮಾಡಿರಿ. ಬುಧ, ಶುಕ್ರ, ಶನಿ ಶುಭದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಪ್ರತಿಭಾ ಪ್ರದರ್ಶನಕ್ಕೆ ಹಲವು ಉನ್ನತ ಅವಕಾಶ ದೊರೆಯಲಿದೆ. ಕಾರ್ಯಗಳ ಒತ್ತಡದ ನೆಪದಿಂದ ಕೌಟುಂಬಿಕ ವಿಚಾರ ಕಡೆಗಣಿಸಬೇಡಿ. ದೂರದೂರುಗಳ ಪ್ರಯಾಣ ಬೇಡ. ಬೇರೆಯವರ ಮಾತಿನಿಂದ ಗೃಹ ನಿರ್ಮಾಣ ದಂತಹ ದೊಡ್ಡ ಕೆಲಸಕ್ಕೆ ಕೈ ಹಾಕಬೇಡಿ. ನಿಮ್ಮ ಸಾಮರ್ಥ್ಯದ ಅರಿವು ಇರಲಿ. ಗೌಪ್ಯ ವಿಚಾರಗಳನ್ನು ಆತ್ಮೀಯರೊಂದಿಗೆ ಮಾತ್ರ ಚರ್ಚಿಸಿ. ಮನೆತನದ ವ್ಯವಹಾರಗಳು ಮಕ್ಕಳಿಗೆ ತಿಳಿದಿದ್ದರೆ ಉತ್ತಮ. ಅವಿವಾಹಿತರು ಮದುವೆ ವಿಚಾರದಲ್ಲಿ ಆತುರದ ನಿರ್ಧಾರ ಬೇಡ. ರಕ್ಷಣಾ ಇಲಾಖೆಯಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿ. ವಾಣಿಜ್ಯ ಇಲಾಖೆ ನೌಕರರಿಗೆ ಅನಿರೀಕ್ಷಿತ ವರ್ಗಾ ವಣೆಯಾಗುವ ಸಂಭವ. ಸೋಮ, ಮಂಗಳ, ಬುಧ ಶುಭದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿರುದ್ಯೋಗಿಗಳ ಪ್ರಯತ್ನ ಫಲ ಕೊಡಲಿದೆ. ಆಯ್ಕೆ ಉತ್ತಮ ವಾಗಿರಲಿ. ಸಂಶೋಧಕರಿಗೆ ಸರ್ಕಾರದಿಂದ ನೆರವು ದೊರೆಯಲಿದೆ. ಅತಿಯಾಗಿ ಬೇರೆಯವರನ್ನು ಅವಲಂಬಿಸಿದರೆ ನಷ್ಟಕ್ಕೆ ಆಹ್ವಾನಿಸಿದಂತೆ. ಹಣಕಾಸಿನ ಹರಿವು ಆರಂಭದಲ್ಲಿ ಜೋರಾಗಿದ್ದು, ಅನಿರೀಕ್ಷಿತವಾಗಿ ಕ್ಷೀಣಿಸುವುದರಿಂದ ಅತಿಯಾದ ವೆಚ್ಚದ ಒಳ್ಳೆಯದಲ್ಲ. ಸೋದರಿ ಮಗಳ ಮದುವೆ ವಿಚಾರ ಮುನ್ನೆಲೆಗೆ ಬರಲಿದೆ. ಬಂಡವಾಳ ಹೂಡುವ ಮೊದಲು ಲಾಭ-ನಷ್ಟಗಳ ಅರಿವಿರಲಿ. ಸ್ನೇಹಿ ತರ ಸಲಹೆ ನಿಸ್ಸಂಕೋಚವಾಗಿ ಸ್ವೀಕರಿಸಿ. ಅಮೂಲ್ಯ ವಸ್ತುಗಳು ಕಣ್ಮರೆಯಾಗುವ ಸಂಭವವಿದೆ. ಚಿಕ್ಕಮಕ್ಕಳಿಗೆ ಶೀತಬಾಧೆ ಕಾಣಿಸಿಕೊಳ್ಳಲಿದೆ. ಭಾನು, ಬುಧ, ಗುರು ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮತ್ತೊಬ್ಬರ ಮಾತು ಕೇಳುವ ಕನಿಷ್ಠ ಸೌಜನ್ಯ ರೂಢಿಸಿಕೊಳ್ಳುವುದ ರಿಂದ ನಿಮ್ಮ ಘನತೆ ಹೆಚ್ಚಲಿದೆ. ಆದಾಯಕ್ಕೆ ಇದ್ದ ಅಡಚಣೆಗಳು ಕ್ರಮೇಣ ದೂರವಾಗಲಿವೆ. ಯಾವುದೇ ಕಾರಣಕ್ಕೂ ಮತ್ತೊಬ್ಬರಾಡುವ ಚುಚ್ಚು ಮಾತುಗಳಿಗೆ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ. ವೃತ್ತಿಯಲ್ಲಿ ನಿಮ್ಮ ಸಮಯ ಪ್ರಜ್ಞೆಯಿಂದ ಕಂಪನಿಗೆ ಆಗಬಹುದಾಗಿದ್ದ ನಷ್ಟ ತಪ್ಪಲಿದೆ. ನಿಮ್ಮ ಸ್ವಂತಿಕೆಯಲ್ಲೇ ನಿಮ್ಮ ಯಶಸ್ಸು ಅಡಗಿದೆ ಮರೆಯಬೇಡಿ. ಸಮಸ್ಯೆ ಎದುರಾದಾಗ ಸ್ನೇಹಿತರು ನಿಮ್ಮ ನೆರವಿಗೆ ಬರುವರು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಉತ್ತಮ. ಸದ್ಯ ಸಾಲ ಕೊಡುವುದು, ತೆಗೆದುಕೊಳ್ಳುವುದು ಹಿತವಲ್ಲ. ಬುಧ, ಶುಕ್ರ, ಶನಿ ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನಿಮ್ಮ ಬಗ್ಗೆ ಸಾಮಾನ್ಯರು ಮಾಡುವ ಟೀಕೆಗೆ ಚಿಂತಿಸಬೇಡಿ. ಅದು ಅವರ ದೌರ್ಬಲ್ಯದ ಸಂಕೇತ. ಬಂಧುಗಳು ಆಸ್ತಿಗಾಗಿ ಹಕ್ಕು ಮಂಡಿಸು ವರು. ತಾಳ್ಮೆಯಿರಲಿ. ಎಲ್ಲವೂ ಸುಖಾಂತವಾಗಲಿದೆ. ಆದಾಯದಲ್ಲಿ ನಿರೀಕ್ಷಿಸಿ ದಷ್ಟು ಇಲ್ಲದಿದ್ದರೂ ತುಸು ಏರಿಕೆ ಕಂಡು ಬರಲಿದೆ. ಈ ರಾಶಿಯ ಮಹಿಳೆಯರಿಗೆ ಇನ್ನು ಮುಂದೆ ಉತ್ತಮ ದಿನಗಳಿವೆ. ಕ್ರೀಡೆಯಲ್ಲಿ ಸಾಧನೆ ತೋರಿದವರಿಗೆ ಬಯಸಿ ದಲ್ಲಿ ಉದ್ಯೋಗ ದೊರೆಯಲಿದೆ ಅರ್ಧಕ್ಕೆ ನಿಲ್ಲಿಸಿದ್ದ ವಿದ್ಯಾಭ್ಯಾಸ ಮುಂದು ವರೆಸಲು ಸಕಾಲ. ಕೃಷಿಕ ಮಿತ್ರರಿಗೆ ಕಾರ್ಮಿಕರ ಕೊರತೆ ಕಂಡು ಬರಬಹುದು. ಬ್ಯಾಂಕ್ ನೌಕರಿಯಲ್ಲಿರುವವರಿಗೆ ಕರ್ತವ್ಯದಲ್ಲಿ ತುಸು ಉದಾಸೀನತೆ ಕಂಡು ಬರಬಹುದು. ಭಾನು, ಸೋಮ, ಶನಿ ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಬಂಧುಗಳು ನಿಮ್ಮ ಮೇಲಿಟ್ಟಿದ್ದ ಅಪನಂಬಿಕೆ ದೂರವಾಗಲಿದೆ. ಇದರಿಂದ ಮನಸ್ಸು ಹಗುರವಾಗಲಿದೆ. ಮನೆತನದ ಬಗ್ಗೆ ಹೆಚ್ಚಿನ ಜವಾಬ್ದಾರಿ ನಿಮ್ಮನ್ನು ಒತ್ತಡಕ್ಕೆ ತಳ್ಳಬಹುದು. ಹಣಕಾಸಿನ ವ್ಯವಹಾರದಲ್ಲಿ ನಂಬಿದವರಿಂದಲೇ ಮೋಸ. ಪುರಾತನ ವಸ್ತುಗಳ ಖರೀದಿ. ಹೆಚ್ಚಿನ ಆದಾಯದ ನಿರೀಕ್ಷೆ ಬೇಡ. ಬದುಕಿನಲ್ಲಿ ಭಾರೀ ಬದಲಾವಣೆ ಗಾಳಿ ಬೀಸಲಿದೆ. ಕ್ರೀಡಾ ಮನೋಭಾವದಿಂದ ಸ್ವೀಕರಿಸಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಮಗಳಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ. ಮಕ್ಕಳ ಅಭಿವೃದ್ಧಿ ಮಂದಗತಿಯಲ್ಲಿ ಸಾಗಲಿದೆ. ಸೋಮ, ಬುಧ, ಶುಕ್ರ ಶುಭದಿನಗಳು.

**ವಿಶೇಷ ದಿನಗಳು : ದಿ. 19 ಬುಧವಾರ ಬೆನಕನ ಅಮವಾಸ್ಯೆ, 21 ಶುಕ್ರವಾರ ಸ್ವರ್ಣಗೌರಿ ವ್ರತ, 22 ಶನಿವಾರ ಗಣೇಶ ಚತುರ್ಥಿ.**

# ಜಿಲ್ಲಾಭಿವೃದ್ಧಿಗೆ ಎಲ್ಲರೂ ಕಟಿಬದ್ಧರಾಗೋಣ



1. ಪೊಲೀಸ್ ಶ್ವಾನ ತುಂಗಾಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಸನ್ಮಾನಿಸಿದರು.



2. ವಿಕಲಚೇತನರಿಗೆ ಯಂತ್ರ ಚಾಲಿತ ಬೈಸಿಕಲ್ ವಿತರಿಸಲಾಯಿತು.

**(1ನೇ ಪುಟದಿಂದ)** ನೆರವೇರಿಸಿ ಅವರು ಜಿಲ್ಲಾ ಜನತೆಯನ್ನು ದ್ದೇಶಿಸಿ ಮಾತನಾಡಿದರು.

ತಮ್ಮ ಸಂದೇಶದಲ್ಲಿ ಜಿಲ್ಲೆಯ ಪ್ರಮುಖ ಅಭಿವೃದ್ಧಿ ಪರ ಯೋಜನಗಳನ್ನು ಹಾಗೂ ಸಾಧನೆಗಳನ್ನು ಹಂಚಿಕೊಂಡ ಅವರು, ಮುಂಬರುವ ದಿನಗಳಲ್ಲಿ ನಾವೆಲ್ಲರೂ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಕಟಿಬದ್ಧರಾಗೋಣ ಎಂದು ಹೇಳಿದರು.

ತಾಯಿ ಭಾರತಾಂಬೆಯ ದೇಶಪ್ರೇಮಿ ಸುಪುತ್ರ-ಸುಪುತ್ರಿಯರ ವೀರೋಚಿತ ವೀರಾಗ್ರಣಿಗಳ ಹೋರಾಟ ಹಾಗೂ ತ್ಯಾಗದ ಫಲವಾಗಿ ಸ್ವಾತಂತ್ರ್ಯವೆಂಬ ಅಮೃತ ಫಲ ಭಾರತಕ್ಕೆ ದೊರೆತದ್ದು ಈಗ ಇತಿಹಾಸವಾದರೂ, ಈ ಸ್ವಾತಂತ್ರ್ಯವೆಂಬ ಶಾಂತಿಯ ನೆಲೆಯಲ್ಲಿ ಸಾಗಬೇಕಿದೆ. ಇಡೀ ವಿಶ್ವವೇ ಕೊರೊನಾ ವೈರಸ್ ದಾಳಿಯಿಂದ ತಲ್ಲಣಗೊಂಡಿದೆ. ನಾವೆಲ್ಲರೂ ಇದನ್ನು ದಿಟ್ಟವಾಗಿ ಎದುರಿಸುತ್ತಿದ್ದಯ, ಕೊರೊನಾ ಜೊತೆ ಜೊತೆಗೇ ಅಭಿವೃದ್ಧಿಯೆಡೆ ನಡೆಯಬೇಕಿದೆ ಎಂದು ಹೇಳಿದರು.

ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾ ಟಕ ನೀಡಿರುವ ಕೊಡುಗೆ ಅಪಾರವಾದದ್ದು. ದೇಶದಲ್ಲಿ ಯಾವಾಗ ಸ್ವಾತಂತ್ರ್ಯಕ್ಕಾಗಿ ಹೋರಾಟ ಆರಂಭ ವಾಯಿತೋ ಆಗಿನಿಂದಲೇ ಕರ್ನಾಟಕದಲ್ಲೂ ಹೋರಾಟ ಆರಂಭವಾಗಿತ್ತು ಎಂದರು.

ಲಾಕ್‌ಡೌನ್ ಪರಿಣಾಮ ಎಲ್ಲಾ ವರ್ಗದ ಜನತೆ ಆರ್ಥಿಕ ಸಂಕಷ್ಟ ಎದುರಿಸುವಂತಾಗಿತ್ತು. ಇದನ್ನು ಅರಿತ ರಾಜ್ಯ ಸರ್ಕಾರ ಮೂರು ಪ್ಯಾಕೇಜ್‌ಗಳಲ್ಲಿ ಒಟ್ಟು 2272 ಕೋಟಿ ರೂ. ಪರಿಹಾರ ನೀಡಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕೋವಿಡ್ ಸಾವಿನ ಪ್ರಮಾಣ ಕಡಿಮೆ ಮಾಡಬೇಕಾಗಿದ್ದು, ಇದಕ್ಕಾಗಿ ರೋಗ ಲಕ್ಷಣ ಇರುವ ಜನರ್ನು ಕೂಡಲೇ ಸರ್ವೇಕ್ಷಣಾ ಘಟವು ಪತ್ತೆ ಹಚ್ಚಬೇಕು. ಹೆಚ್ಚು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚಬೇಕಿದೆ ಎಂದು ಹೇಳಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ.ರವೀಂದ್ರನಾಥ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪಂಚಾಯತ್ ಅಧ್ಯಕ್ಷೆ ದೀಪಾ ಜಗದೀಶ್, ಉಪಾಧ್ಯಕ್ಷೆ ಸಾಕಮ್ಮ, ಪಾಲಿಕೆ ಮೇಯರ್ ಬಿ.ಜಿ.ಅಜಯಕುಮಾರ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ.ಸಿಇಓ ಪದ್ಮಾ ಬಸವಂತಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಪೊಲೀಸ್ ಮಹಾ ನಿರ್ದೇಶಕ ಎಸ್.ರವಿ, ಉಪ ವಿಭಾಗಾಧಿಕಾರಿ ಮಮತಾ ಹೊಸ ಗೌಡರ್, ಬಿ.ಟಿ. ಕುಮಾರ ಸ್ವಾಮಿ ಸೇರಿದಂತೆ ಇತರ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಸಾರ್ವಜನಿಕರಿಲ್ಲದ ಕಾರ್ಯಕ್ರಮದಲ್ಲಿ ಸಚಿವರ ಸುದೀರ್ಘ ಭಾಷಣ

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಬೆರಳೆಣಿಕೆಯಷ್ಟು ಸಾರ್ವಜನಿಕರು ಮಾತ್ರ ಆಗಮಿಸಿದ್ದರು. ಧ್ವಜಾರೋಹಣ ನೆರವೇರಿಸುತ್ತಿದ್ದಂತೆ ಅವರೂ ಜಾಗ ಖಾಲಿ ಮಾಡಿದ್ದರು. ಇದೇ ವೇಳೆ ಸಚಿವರು ಸುಮಾರು 10 ಪುಟಗಳಷ್ಟು ಸುದೀರ್ಘ ಭಾಷಣ ವಾಚಿಸಿದರು.

**6 ತಂಡಗಳ ಪಥ ಸಂಚಲನ :** ಕೋವಿಡ್ ಹಿನ್ನೆಲೆಯಲ್ಲಿ ಈ ಬಾರಿ ವಿದ್ಯಾರ್ಥಿಗಳ ತಂಡಗಳನ್ನು ಹೊರತುಪಡಿಸಿ ಸರ್ಕಾರಿಯ 6 ತಂಡಗಳು ಪಥ ಸಂಚಲನದಲ್ಲಿ ಪಾಲ್ಗೊಂಡವು. ಡಿಎಆರ್‌ನ ಆರ್‌ಪಿಐ ಎಸ್.ಎನ್.ಕಿರಣ್ ಕುಮಾರ್ ಕವಾಯತು ಪ್ರಧಾನ ನಾಯಕತ್ವ ವಹಿಸಿದ್ದರು.

ರಾಘವೇಂದ್ರ ರಾಮತಾಳ ನೇತೃತ್ವದ ಡಿ.ಎ.ಆರ್ ಪೊಲೀಸ್ ತಂಡ, ಪಿಎಸ್‌ಐ ನೂರ್ ಆಹಮದ್ ನೇತೃತ್ವದ ನಾಗರಿಕ ಪೊಲೀಸ್ ತಂಡ, ಅಂಬರೀಶ್ ಕೆ.ಎಸ್ ನೇತೃತ್ವದ ಗೃಹರಕ್ಷಕ ದಳ ತಂಡ, ಭರತೇಶ್ ನೇತೃತ್ವದ ಅಬಕಾರಿ ಜಿಲ್ಲಾ ತಂಡ, ವೆಂಕಟೇಶ್ ನಾಯ್ಕ ನೇತೃತ್ವದ ಜಿಲ್ಲಾ ಅರಣ್ಯ ಇಲಾಖೆ ತಂಡ, ಸುಹಾಸ್.ಪಿ ನೇತೃತ್ವದ ಅಗ್ನಿಶಾಮಕ ದಳ ತಂಡವು ಮುಖ್ಯ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸುವ ಮೂಲಕ ಆಕರ್ಷಕ ಪಥಸಂಚಲನ ನಡೆಸಿದವು. ಈ 6 ತಂಡಗಳಿಗೆ ಡಿಎಆರ್‌ನ ಎಆರ್‌ಎಸ್‌ಐ ಬ್ಯಾಂಡ್ ಮಾಸ್ಟರ್ ಹೊನ್ನೂರಪ್ಪ ವಾದ್ಯ ನುಡಿಸಿದರು.

ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರ ಆರೋಗ್ಯದ ಹಿತಕ್ಕಾಗಿ ಶ್ರಮಿಸಿದ ವೈದ್ಯರು, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರಿಗೆ ಸಚಿವರು ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದರು. ಇದೇ ವೇಳೆ ವಿಕಚಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ಗಳನ್ನು ವಿತರಿಸಲಾಯಿತು. ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಬೆಳೆಗಳ ಮಾಹಿತಿಯನ್ನು ಛಾಯಾಚಿತ್ರಗಳ ಸಮೇತ ಸ್ವಯಂ ದಾಖಲಿಸುವ ವಿನೂತನ ಯೋಜನೆಯ 'ಬೆಳೆ ಸಮೀಕ್ಷೆ ಮೊಬೈಲ್ ಆಪ್ ಪ್ರಚಾರ ವಾಹನಕ್ಕೆ' ಸಚಿವರು ಚಾಲನೆ ನೀಡಿದರು. ದೃಷ್ಟಿದೋಷ ಉಳ್ಳವರಿಗೆ ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು. ಅಲ್ಲದೆ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ 5 ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಸಹಕರಿಸಿದ ಪೊಲೀಸ್ ಡಾಗ್ 'ತುಂಗಾ'ಳನ್ನು ಸನ್ಮಾನಿಸಲಾಯಿತು.

## ದಿನ 3 ಸಾವಿರ ಟೆಸ್ಟ್ ಗುರಿ

**(1ನೇ ಪುಟದಿಂದ) ಸೂಚಿಸಿದ್ದೇನೆ ಎಂದರು.** ಇಡೀ ಜಿಲ್ಲೆಯಲ್ಲಿ ಪ್ರತಿಯೊಬ್ಬರನ್ನೂ ಪರೀಕ್ಷಿಸುವಂತಹ ದಿಟ್ಟ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಮಂದಿನ ದಿನಗಳಲ್ಲಿ ಕ್ರಮೇಣ ಕೋವಿಡ್ ಸೋಂಕು ಕಡಿಮೆಯಾಗುವ ವಿಶ್ವಾಸ ವ್ಯಕ್ತಪಡಿಸಿದರು.

**ವೈದ್ಯ ವಿದ್ಯಾರ್ಥಿಗಳ ನೇಮಕ: ರಾಜ್ಯದಲ್ಲಿ ಮೂರು ವರ್ಷದ ಅವಧಿ ಪೂರೈಸಿದ 3 ಸಾವಿರ ವೈದ್ಯ ವಿದ್ಯಾರ್ಥಿಗಳ ವೈದ್ಯಕೀಯ ವಿದ್ಯಾರ್ಥಿಗಳೆಲ್ಲರನ್ನೂ ನೇಮಿಸಿಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಜಿಲ್ಲೆಯಲ್ಲೂ ಸುಮಾರು 150-200 ವಿದ್ಯಾರ್ಥಿಗಳು ಸೇವೆಗೆ ಲಭ್ಯವಿದ್ದಾರೆ ಎಂದರು.**

**ರಾಯಣ್ಣ ಸೇತುವೆ: ನಗರದ ರೈಲ್ವೇ ಕ್ರಾಸಿಂಗ್ ಮೇಲ್ಸೇತುವೆಗೆ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಎಂದು ನಾಮಕರಣ ಮಾಡಲು ದೂಡ ಹಾಗೂ ಪಾಲಿಕೆಗೆ ಸೂಚಿಸಲಾಗಿದೆ ಎಂದು ಸಚಿವರು ಇದೇ ಸಂದರ್ಭ ದಲ್ಲಿ ಹೇಳಿದರು. ಡಿ.ಜೆ. ಹಳ್ಳಿ ಘಟನೆ ಪೂರ್ವನಿಯೋಜಿತ ಕೃತ್ಯವಾಗಿದ್ದು, ದೇಶಕ್ಕೆ ದ್ರೋಹ ಬಗೆಯುವ ಕೆಲಸ ಯಾರು ಮಾಡಿದರೂ ಅವರ ಮೇಲೆ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.**

## ಕೊರೊನಾ ವಿರುದ್ಧ ಹೋರಾಡುತ್ತಾ ಕಲ್ಯಾಣ ರಾಜ್ಯ

**(1ನೇ ಪುಟದಿಂದ)** ಮಳೆ, ಪ್ರವಾಹ ಹಾಗೂ ಬರದ ಜೊತೆಗೆ ಕೊರೊನಾದ ಸವಾಲಿದೆ ಎಂದು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಕೊರೊನಾ ಎದುರಿಸಲು ಅವಿರತವಾಗಿ ಶ್ರಮಿಸಿರುವ ಆಡಳಿತ ಯಂತ್ರ, ಖಾಸಗಿ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಸ್ವಯಂ ಸೇಕವರೆಲ್ಲರನ್ನು ಮುಖ್ಯಮಂತ್ರಿ ಸ್ಮರಿಸಿದ್ದಾರೆ.

ಅಭಿವೃದ್ಧಿಯೇ ಆಡಳಿತ ಮಂತ್ರ ಎಂಬ ಧ್ಯೇಯದೊಂದಿಗೆ ಕಲ್ಯಾಣ ರಾಜ್ಯ ಕಟ್ಟುವುದೇ ನಮ್ಮ ಗುರಿ. ಕೊರೊನಾ ವಿರುದ್ಧದ ಹೋರಾಟದ ಈ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರ ರಾಮರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಿ ರಾಜಧರ್ಮ ಪಾಲನೆಗೆ ನಾವು ಮುಂದಾಗಿದ್ದೇವೆ ಎಂದವರು ತಿಳಿಸಿದ್ದಾರೆ. ಕೊರೊನಾ ಕೇವಲ ಆರೋಗ್ಯ ಕ್ಷೇತ್ರವನ್ನಷ್ಟೇ ಅಲ್ಲದೇ ಪ್ರತಿಯೊಂದು ಕ್ಷೇತ್ರವನ್ನೂ ಬಾಧಿಸುತ್ತಿದೆ. ಲಾಕ್‌ಡೌನ್ ಕಾಲದಲ್ಲಿ ಮಂದಗತಿಗೆ ತೆರಳಿದ್ದ ನಮ್ಮ ಜೀವನ ಈಗ ಚೇತರಿಸಿಕೊಳ್ಳುತ್ತಿದೆ. ನಾನೂ ಕೊರೊನಾದಿಂದ ಬಾಧಿತನಾಗಿ ಈಗ ಗುಣಮುಖನಾಗಿದ್ದೇನೆ. ಜನರು ಸೋಂಕಿನ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಜಾಗರೂಕತೆಯಿಂದ ಜೀವನ ನಡೆಸಬೇಕು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ದಾಖಲೆಯ ಮಳೆ, ಪ್ರವಾಹದ ಜೊತೆಗೆ ಬರ ಹಾಗೂ ಶತಮಾನದಲ್ಲೇ ಭಯಾನಕವಾದ ಕೊರೊನಾ ಬೃಹತ್ ಸವಾಲುಗಳನ್ನು ತಂದಿದೆ. ಆರ್ಥಿಕ ಹಿಂಜರಿಕೆ, ಉದ್ಯೋಗ ಕಡಿತ ಹಾಗೂ ಬೊಕ್ಕಸಕ್ಕೆ ರಾಜಸ್ವ ನಷ್ಟ, ಸ್ತಬ್ಧವಾದ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಂ ದಾಗಿ ಎಲ್ಲರೂ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಇಂತಹ ಸಮಯದಲ್ಲಿ ಸಮಾಜದಲ್ಲಿ ನೆಮ್ಮದಿ ಮತ್ತು ಶಾಂತಿ ಸ್ಥಾಪಿಸಲು ಹಾಗೂ ಸಂಕಷ್ಟಕ್ಕೆ ಈಡಾದ ಜನರಲ್ಲಿ ಭರವಸೆ ಮೂಡಲಿ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದು ಕೊಂಡಿದೆ. ಕಾಯಕವೇ ಕೈಲಾಸ ಎಂಬ ವಚನ ವನ್ನು ಕಾರ್ಯ ಸಂಸ್ಕೃತಿಯಲ್ಲಿ ಅಳವಡಿಸಿ ಕೊಂಡು, ಸರ್ಕಾರದ ಕೆಲಸ ದೇವರ ಕೆಲಸ ಎಂಬುದನ್ನು ಪ್ರಾಮಾಣಿಕವಾಗಿ ಕಾರ್ಯ ರೂಪಕ್ಕೆ ತರಲು ಹಗಲಿರುಳು ಶ್ರಮಿಸುತ್ತಿದ್ದೇವೆ ಎಂದವರು ಹೇಳಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಈ ವರ್ಷದ ಸ್ವಾತಂತ್ರ್ಯ ದಿನಾಚರಣೆ ಸಡಗರ ರಹಿತವಾಗಿತ್ತು. ಶಾಲಾ ಮಕ್ಕಳಾಗಲೀ, ಸಾರ್ವಜನಿಕರಾಗಲೀ ಸಮಾರಂಭದಲ್ಲಿ ಉಪಸ್ಥಿತರಿರಲಿಲ್ಲ. ಆಯ್ದ ಜನಪ್ರತಿನಿಧಿಗಳು, ಅಧಿಕಾರಿಗಳು, ಕೊರೊನಾ ವಾರಿಯರ್‌ಗಳು ಹಾಗೂ ಸೋಂಕಿನಿಂದ ಗುಣಮುಖರಾದ ಆಹ್ವಾನಿತರು ಮಾತ್ರ ಉಪಸ್ಥಿತರಿದ್ದರು.

## ಹರಿಹರದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ




ಹರಿಹರ, ಆ.15- ನಗರದ ಹೊಸಭರಂಪುರ ಬಡಾವಣೆಯ ನೂರ ಎಂಟು ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಇರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ಮಹಾಸ್ವಾಮಿಗೆ ಶ್ರಾವಣ ಮಾಸದ ಅಂಗವಾಗಿ ವಿಶೇಷ ಪೂಜೆ ಮಹಾಮಂಗಳಾರತಿ ಹೂವಿನ ಅಲಂಕಾರ ನಂತರದಲ್ಲಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪಳನಿಸ್ವಾಮಿ, ಸುಬ್ರಹ್ಮಣ್ಯ, ರಾಜೇಂದ್ರನ್, ಚಕ್ರವರ್ತಿ, ರುದ್ರುಮುನಿ ಬಾಪೂಜಿ, ಶೇಖರ್, ರಮೇಶ್ ಭಟ್ಟರ್, ಯುವರಾಜ್, ಈರಣ್ಣ ಹಾವನೂರು ಇತರರು ಹಾಜರಿದ್ದರು.

## ಹೊನ್ನಾಳಿ : ಕಂಪ್ಯೂಟರ್ ತರಬೇತಿ

ಹೊನ್ನಾಳಿ, ಆ. 15- ಕಲ್ಪವೃಕ್ಷ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಕಂಪ್ಯೂಟರ್ ತರಬೇತಿ ನೀಡಲಾಗುತ್ತಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಗಂಗಾಧರ ಎಸ್. ರಾಥೋಡ (9481016846) ತಿಳಿಸಿದ್ದಾರೆ.




| Grade | no. of students |
|---|---|
| A1 | 02 |
| A2 | 06 |
| B1 | 11 |
| B2 | 09 |
| C1 | 03 |
| C2 | 05 |
| TOTAL | 36 |

Sri Shivaprakasha Swamiji, Management Principal and Staff Congratulates the X Std Students for their Achievements

# ಕಂದಗಲ್ಲು 'ಪಂಚವಟಿ'

(3ನೇ ಪುಟದಿಂದ) ನೆನೆದರು.

ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಈ ಐದು ವೃಕ್ಷಗಳು ಕಾಣ ಸಿಗುತ್ತವೆ. ಆದರೆ ಅದು ಪಂಚವಟಿಯಾಗದು, ಅದಕ್ಕೆ ನಿರ್ದಿಷ್ಟ ದೂರ, ದಿಕ್ಕಿನಲ್ಲಿದ್ದಾಗ ಮಾತ್ರ ಅದರ ಉಪಯೋಗ ಪಡೆಯಲು ಸಾಧ್ಯ ಎಂಬುದು ಅವರ ಅಭಿಪ್ರಾಯ. ಸದ್ಯ ಮೇಲುಕೋಟೆಯಲ್ಲೂ ಈ ರೀತಿ ಪಂಚ ಮರಗಳಿವೆ. ಆದರೆ ನಿರ್ದಿಷ್ಟ ದಿಕ್ಕು, ದೂರ ಇಲ್ಲದ ಕಾರಣ ಅದು ಪಂಚವಟಿ ಅಲ್ಲ ಎನ್ನುತ್ತಾರೆ ಈಶ್ವರಪ್ಪ.

ಆಲ, ಅತ್ತಿ ಹಾಗೂ ಅರಳಿ ಸಸಿಗಳು ಅರಣ್ಯ ಇಲಾಖೆಯಲ್ಲಿ ಸುಲಭವಾಗಿ ದೊರೆತವು. ಆದರೆ ಬಿಲ್ವ ಹಾಗೂ ಬನ್ನಿ ಗಿಡಗಳಿಗಾಗಿ ಸಾಕಷ್ಟು ಶ್ರಮ ಪಡಬೇಕಾಯಿತು. ಈ ಎರಡೂ ಪೂಜ್ಯನೀಯ ಮರಗಳ ಎಲ್ಲೆಂದರಲ್ಲಿ ಬೆಳೆಯುವುದೂ ಇಲ್ಲ, ಬೆಳೆಸುವುದೂ ಇಲ್ಲ. ಇವನ್ನು ಸಾಕಿದ ಮೇಲೆ ಎಲ್ಲಿ ಬೇಕೆಂದರಲ್ಲಿ ನೆಡಲೂ ಆಗದು ಈ ಕಾರಣಕ್ಕಾಗಿಯೇ ಸಸಿ ಸಿಗುವುದು ಕಷ್ಟವಾಗಿತ್ತು ಎಂದು ಅಭಿಪ್ರಾಯಿಸಿದರು.

ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಪಂಚವಟಿ ನಿರ್ಮಿಸಿದ್ದೇನೆ. ಇದರ ಉಪಯೋಗ ಪಡೆಯಲು ಇನ್ನೂ ಐದಾರು ವರ್ಷಗಳಾದರು ಬೇಕು. ಪ್ರಕೃತಿ ದಿಢೀರ್ ಕೊಡುಗೆ ನೀಡುವುದಿಲ್ಲ ಎಂದರು.

## ಪಂಚ ವೃಕ್ಷಗಳಲ್ಲಡಗಿದೆ ಶಕ್ತಿ

(3ನೇ ಪುಟದಿಂದ) **ಅರಳಿ:** ಅರಳಿ ವೃಕ್ಷದ ಬುಡದಲ್ಲಿ ಬ್ರಹ್ಮ, ಮಧ್ಯದಲ್ಲಿ ವಿಷ್ಣುವಿನ ವಾಸ, ಮೇಲ್ತುದಿಯಲ್ಲಿ ಶಿವನು ನೆಲೆಸಿದ್ದಾನೆ ಎಂದು ನಂಬಿಕೆ ಇದೆ. ಆದ್ದರಿಂದ ಅರಳಿ ವೃಕ್ಷವನ್ನು ಪೂಜೆಸಲಾಗುತ್ತದೆ ಅತೀ ಹೆಚ್ಚು ಆಮ್ಲಜನಿಕ ನೀಡುವ ವೃಕ್ಷವಿದು.

**ಅತ್ತಿ:** ಅತ್ತಿ ಮರಕ್ಕೆ ದತ್ತಾತ್ರೇಯ ವೃಕ್ಷವೆಂದು ಕರೆಯುತ್ತಾರೆ. ಅತ್ತಿಯ ಸಣ್ಣ ಕೊಂಬೆಗಳನ್ನು ಮದುವೆ ಸಮಾರಂಭದಲ್ಲಿ ಬಳಸುತ್ತಾರೆ. ಅತ್ತಿ ಹಣ್ಣಗಳು ಔಷಧಿ ಗುಣಗಳನ್ನು ಹೊಂದಿವೆ. ಅತ್ತಿ ಹಣ್ಣು ತಿಂದರೆ ಕಣ್ಣಿಗೆ ಯಾವುದೇ ರೋಗ ಬರುವುದಿಲ್ಲ ಎಂಬ ಮಾತಿದೆ.

## ದೇವಿಕಾ ಪ್ರೌಢಶಾಲೆಗೆ ಶೇ.80 ಫಲಿತಾಂಶ





ರಾಣೇಬೆನ್ನೂರು, ಆ.15- ನಗರದ ದೇವಿಕಾ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.80 ಫಲಿತಾಂಶ ಲಭಿಸಿದೆ.

151 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಅತ್ಯುನ್ನತ ಶ್ರೇಣಿಯಲ್ಲಿ 32, ಪ್ರಥಮ ಶ್ರೇಣಿ 110, ದ್ವಿತೀಯ ಶ್ರೇಣಿಯಲ್ಲಿ 9 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕಿರಣಕುಮಾರ್ ಬೆಳಕೇರಿ 605 (ಶೇ.96.68) ಅಂಕಗಳನ್ನು ಪಡೆದು ಪ್ರಥಮ ಶಾಲೆಗೆ ಸ್ಥಾನದಲ್ಲಿದ್ದಾಳೆ. ಅಲ್ಮಾಸ್ ಫಾತೀಮಾ ಹಲಗೇರಿ 598 (ಶೇ.95.68), ಅನನ್ಯ ಪಾಟೀಲ್ 595 (ಶೇ.95.20) ಮತ್ತು ಎಸ್.ಕೆ. 595 (ಶೇ. 95.20) ಅಂಕಗಳನ್ನು ಗಳಿಸಿ ಶಾಲೆಗೆ ನಂತರದ ಸ್ಥಾನದಲ್ಲಿದ್ದಾರೆ.

## ನಿಂಚನ ಪಬ್ಲಿಕ್‌ಗೆ ಶೇ. 90 ಫಲಿತಾಂಶ

ದಾವಣಗೆರೆ, ಆ.15- ನಗರದ ನಿಂಚನ ಪಬ್ಲಿಕ್ ಶಾಲೆಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮವಾಗಿ ಬಂದಿದೆ.

ಎನ್.ಎಸ್. ದರ್ಶನ್ ಶೇ. 90.80 ಅಂಕಗಳಿಸಿ ಮೊದಲ ಸ್ಥಾನದಲ್ಲಿದ್ದಾನೆ. ಕೆ.ಪಿ. ಅಮೂಲ್ಯ, ಪಿ.ಎನ್. ದರ್ಶನ್, ಕೆ.ಎಂ. ಪವನ್, ಬಿ.ಜಿ. ರುದ್ರಮುನಿ, ಆರ್. ರಾಹುಲ್, ಎಸ್. ಹೆಚ್. ಅಕ್ಷತ, ಸಿ.ಆರ್. ಚರಣಾದಿತ್ಯ, ಹೆಚ್. ಗಣೇಶ್, ಕೆ.ಆರ್.. ಯಶಸ್ವಿನಿ, ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

55 ವಿದ್ಯಾರ್ಥಿಗಳು ಪ್ರಥಮ ಸ್ಥಾನ, 13 ದ್ವಿತೀಯ ಸ್ಥಾನ ಪಡೆದಿದ್ದು, ಒಟ್ಟಾರೆ ಶಾಲೆಗೆ ಶೇ. 90 ಫಲಿತಾಂಶ ಲಭಿಸಿದೆ. ಸರಾಸರಿ ಗುಣಮಟ್ಟ ಫಲಿತಾಂಶದಲ್ಲಿ ಎ ಶ್ರೇಣಿ ಪಡೆದಿದೆ.

# 'ಸ್ವಾತಂತ್ರ್ಯ'ದಲ್ಲಿ ಆತ್ಮನಿರ್ಭರ್ ದಿವ್ಯ ಮಂತ್ರ

(1ನೇ ಪುಟದಿಂದ) ಆರು ಲಕ್ಷ ಗ್ರಾಮಗಳನ್ನು ಆಪ್ಟಿಕಲ್ ಫೈಬರ್‌ನಿಂದ ಜೋಡಿಸುವುದು ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಂತರ ಚುನಾವಣೆ ನಡೆಸುವುದೂ ಸೇರಿದಂತೆ ವಿಷಯಗಳಿಗೆ ಸಂಬಂಧಿಸಿದಂತೆ ಮೋದಿ ಘೋಷಣೆ ಮಾಡಿದ್ದಾರೆ.

ಸಾಂಪ್ರದಾಯಿಕ ಕುರ್ತಾ ಪೈಜಾಮ ದಿರಿಸಿನಲ್ಲಿದ್ದ ಪ್ರಧಾನಿ ಸುಮಾರು 90 ನಿಮಿಷಗಳ ಮಾತನಾಡಿದ್ದು, ಆತ್ಮನಿರ್ಭರ್ ಅಭಿಯಾನದ ಮೂಲಕ ಆಮದು ಕಡಿಮೆ ಮಾಡಿ ರಫ್ತಿಗೆ ಉತ್ತೇಜನ ನೀಡುವುದಾಗಿ ಹೇಳಿದ್ದಾರೆ.

ಭಾರತ ದೇಶವನ್ನು ಮೇಕ್ ಇನ್ ಇಂಡಿಯಾದ ಜೊತೆಗೆ ಮೇಕ್ ಫಾರ್ ವರ್ಲ್ಡ್ ಮಂತ್ರದ ಜೊತೆಗೆ ಮುಂದುವರೆಯಬೇಕು ಎಂದು ಹೇಳಿರುವ ಮೋದಿ, ಆತ್ಮನಿರ್ಭರ್ ಭಾರತ್ ಕೇವಲ ಪದವಲ್ಲ, ಇಂದು 130 ಕೋಟಿ ಭಾರತೀಯರ ಮನಸ್ಸಿನಲ್ಲಿ ದಿವ್ಯ ಮಂತ್ರವಾಗಿ ಮಾರ್ಪಟ್ಟಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಹಲವಾರು ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿದೆ. ಇದರಿಂದಾಗಿ ವಿದೇಶಿ ನೇರ ಹೂಡಿಕೆ ಕಳೆದ ವರ್ಷ ದಾಖಲೆಯ ಮಟ್ಟಕ್ಕೆ ತಲುಪಿದೆ ಎಂದು ಮೋದಿ ತಿಳಿಸಿದ್ದಾರೆ.

ಭಾರತದ ನೀತಿಗಳು, ಪ್ರಕ್ರಿಯೆ ಹಾಗೂ ಉತ್ಪನ್ನಗಳು ವಿಶ್ವದಲ್ಲೇ ಅತ್ಯುತ್ತಮವಾಗಿರಬೇಕು ಎಂದು ಹೇಳಿರುವ ಪ್ರಧಾನಿ, ಆಗ ಮಾತ್ರವೇ ಶ್ರೇಷ್ಠ ಭಾರತ ಪರಿಕಲ್ಪನೆ ಸಾಕಾರಗೊಳ್ಳಲು ಸಾಧ್ಯ ಎಂದಿದ್ದಾರೆ.

ಒಟ್ಟಾರೆ ಆರ್ಥಿಕ ಬೆಳವಣಿಗೆ ಹಾಗೂ ಸ್ವಾವಲಂಬನೆಯ ಬಗ್ಗೆ ಒತ್ತು ನೀಡಿರುವ ಪ್ರಧಾನಿ, ಈ ಎಲ್ಲ ಪ್ರಕ್ರಿಯೆಗಳಲ್ಲಿ ಮಾನವೀಯತೆ ಕೇಂದ್ರ ಸ್ಥಾನದಲ್ಲಿರಬೇಕು ಎಂದಿದ್ದಾರೆ.

ಆತ್ಮನಿರ್ಭರ್ ಭಾರತದ ಎದುರು ಹಲವಾರು ಸವಾಲುಗಳು ಹಾಗೂ ಕಳವಳಗಳಿವೆ. ಆದರೆ, ಲಕ್ಷಾಂತರ ಸವಾಲುಗಳಿಗೆ ದೇಶದಲ್ಲಿ ಕೋಟ್ಯಂತರ ಪರಿಹಾರಗಳಿವೆ. ವೋಕಲ್ ಫಾರ್ ಲೋಕಲ್ ಎಂಬುದು ಭಾರತದ ಮಂತ್ರವಾಗಿದೆ ಎದು ಮೋದಿ ಹೇಳಿದ್ದಾರೆ. ತಮ್ಮ ಸರ್ಕಾರ ರೈತರನ್ನು ನಿರ್ಬಂಧಗಳಿಂದ ಮುಕ್ತಗೊಳಿಸಿದೆ. ಈಗ ಅವರು ತಮ್ಮ ಉತ್ಪನ್ನಗಳನ್ನು ಮುಕ್ತವಾಗಿ ಮಾರಬಹುದಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಸೋಪು ಇಲ್ಲವೇ ಬಟ್ಟೆ ಉತ್ಪಾದಕರು ತಮ್ಮ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ ತಮಗೆ ಇಷ್ಟ ಬಂದ ಹಾಗೆ ಮಾರುತ್ತಾರೆ. ಆದರೆ, ಸ್ವಾತಂತ್ರ್ಯ ದೊರೆತ 70 ವರ್ಷಗಳ ನಂತರವೂ ರೈತರು ವ್ಯಾಪಾರದ ಸ್ವಾತಂತ್ರ್ಯ ಹೊಂದಿರಲಿಲ್ಲ ಎಂದು ಪ್ರಧಾನಿ ವಿಷಾದಿಸಿದ್ದಾರೆ.

ಕೊರೊನಾ ಸಂದರ್ಭದಲ್ಲಿ ವೈದ್ಯರು, ನರ್ಸ್, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ನೈರ್ಮಲ್ಯ ಕಾರ್ಮಿಕರೂ ಸೇರಿದಂತೆ ಕೊರೊನಾ ವಾರಿಯರ್‌ಗಳಿಗೆ ಪ್ರಶಂಸಿಸಿರುವ ಪ್ರಧಾನಿ, ಭಾರತ ಕೊರೊನಾ ವಿರುದ್ಧ ಜಯ ಸಾಧಿಸಲಿದೆ ಎಂಬುದು 130 ಕೋಟಿಗೂ ಹೆಚ್ಚಿನ ನಾಗರಿಕರ ಬದ್ಧತೆಯಾಗಿದೆ ಎಂದಿದ್ದಾರೆ.

### ದೇಶದ ಪ್ರತಿಯೊಬ್ಬರಿಗೂ ಕೊರೊನಾ ಲಸಿಕೆ ತಲುಪಿಸಲು ಮಾರ್ಗಸೂಚಿ

ವಿಜ್ಞಾನಿಗಳ ಹಸಿರು ನಿಶಾನೆ ತೋರಿಸಿದ ನಂತರ ದೊಡ್ಡ ಪ್ರಮಾಣದಲ್ಲಿ ಕೊರೊನಾ ಲಸಿಕೆ ಉತ್ಪಾದನೆ ಭಾರತದಲ್ಲಿ ಆರಂಭವಾಗ ಲಿದೆ. ದೇಶದ ಪ್ರತಿಯೊಬ್ಬರಿಗೂ ಅಲ್ಪ ಅವಧಿಯಲ್ಲಿ ಲಸಿಕೆ ತಲುಪಿಸಲು ಮಾರ್ಗಸೂಚಿ ಸಿದ್ಧವಾಗಿದೆ ಎದು ಪ್ರಧಾನಿ ನರೇಂದ್ರ ಮೋದಿ ಹೇಳಿ ದ್ದಾರೆ. ನಮ್ಮ ವಿಜ್ಞಾನಿಗಳು ಋಷಿ - ಮುನಿಗಳ ರೀತಿಯಲ್ಲಿ ಪ್ರಯೋಗಾ ಲಯಗಳಲ್ಲಿ ಕಠಿಣ ಪರಿಶ್ರಮ ವಹಿಸಿದ್ದಾರೆ. ಪ್ರಸಕ್ತ ಮೂರು ಲಸಿಕೆಗಳು ವಿವಿಧ ಹಂತಗಳ ಪರೀಕ್ಷೆಯಲ್ಲಿವೆ ಎಂದು ಪ್ರಧಾನಿ ತಿಳಿಸಿದ್ದಾರೆ.

### ಮಹಿಳೆಯರ ಕನಿಷ್ಠ ಮದುವೆ ವಯಸ್ಸಿಗೆ ಸಮಿತಿ

ಮಹಿಳೆಯರ ಕನಿಷ್ಠ ಮದುವೆ ವಯಸ್ಸು ಎಷ್ಟಿರಬೇಕು ಎಂಬುದರ ಬಗ್ಗೆ ಸರ್ಕಾರ ಸಮಾಲೋಚನೆ ನಡೆಸುತ್ತಿದ್ದು, ಇದಕ್ಕಾಗಿ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಪ್ರಸಕ್ತ ಮಹಿಳೆಯರ ಕನಿಷ್ಠ ಮದುವೆ ವಯಸ್ಸು 18 ಹಾಗೂ ಪುರುಷರ ಮದುವೆ ವಯಸ್ಸು 21 ಆಗಿದೆ. ಮದುವೆಯ ವಯಸ್ಸಿನಲ್ಲಿರುವ ವ್ಯತ್ಯಾಸ ಇತ್ತೀಚೆಗೆ ಆಕ್ಷೇಪಕ್ಕೆ ಕಾರಣವಾಗುತ್ತಿದೆ.

### ಕ್ಷೇತ್ರ ಪುನರ್‌ವಿಂಗಡಣೆ ನಂತರ ಜಮ್ಮು - ಕಾಶ್ಮೀರದ ಚುನಾವಣೆ

ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಪುನರ್ವಿಂಗಡಣೆ ಪೂರ್ಣಗೊಂಡ ನಂತರ ಅಲ್ಲಿ ಚುನಾವಣೆ ನಡೆಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ಕಳೆದ ಒಂದು ವರ್ಷದ ಅವಧಿ ಮಹತ್ವಪೂರ್ಣ ಬೆಳವಣಿಗೆಯ ಘಟ್ಟವಾಗಿದೆ. ಈ ಅವಧಿಯಲ್ಲಿ ಮಹಿಳೆಯರು, ದಲಿತರು ಹಾಗೂ ವಲಸಿಗರಿಗೆ ಮೂಲಭೂತ ಹಕ್ಕುಗಳು ಹಾಗೂ ಘನತೆ ನೀಡಲಾಗಿದೆ ಎಂದವರು ಹೇಳಿದ್ದಾರೆ.

### ಎಲ್ಲಾ ಗ್ರಾಮಗಳಿಗೆ ಸಾವಿರ ದಿನಗಳಲ್ಲಿ ಆಪ್ಟಿಕ್ ಫೈಬರ್

ಮುಂದಿನ ಸಾವಿರ ದಿನಗಳಲ್ಲಿ ದೇಶದ ಎಲ್ಲಾ ಆರು ಲಕ್ಷಕ್ಕೂ ಹೆಚ್ಚಿನ ಗ್ರಾಮಗಳನ್ನು ಆಪ್ಟಿಕಲ್ ಫೈಬರ್ ಮೂಲಕ ಸಂಪರ್ಕಿಸ ಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಇದೇ ಅವಧಿಯಲ್ಲಿ ಸಾಗರ ತಳದ ಮೂಲಕ ಲಕ್ಷದ್ವೀಪಕ್ಕೂ ಆಪ್ಟಿಕಲ್ ಫೈಬರ್ ಸಂಪರ್ಕ ಕಲ್ಪಿಸಲಾಗುವುದು.2014ರಲ್ಲಿ ಕೆಲವೇ ಹಳ್ಳಿಗಳಿಗೆ ಆಪ್ಟಿಕಲ್ ಫೈಬರ್ ಸಂಪರ್ಕ ಇತ್ತು. ಕಳೆದ ಐದು ವರ್ಷಗಳಲ್ಲಿ 1.5 ಲಕ್ಷ ಗ್ರಾಮಗಳನ್ನು ಆಪ್ಟಿಕಲ್ ಫೈಬರ್ ಮೂಲಕ ಸಂಪರ್ಕಿಸಲಾಗಿದೆ ಎಂದವರು ಹೇಳಿದ್ದಾರೆ.

### 100 ನಗರಗಳಲ್ಲಿ ಮಾಲಿನ್ಯ ಕಡಿಮೆ ಮಾಡಲು ಅಭಿಯಾನ

ದೇಶದ 100 ಆಯ್ದ ನಗರಗಳಲ್ಲಿ ಮಾಲಿನ್ಯ ಕಡಿಮೆ ಮಾಡಲು ವಿಶೇಷ ಅಭಿಯಾನ ನಡೆಸಲಾಗುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಮಾಲಿನ್ಯ ನಿವಾರಣೆಗಾಗಿ ಸಮಗ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ 2019ರಲ್ಲಿ ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮ ಆರಂಭಿಸಲಾಗಿದೆ ಎಂದೂ ಪ್ರಧಾನಿ ತಿಳಿಸಿದ್ದಾರೆ.

### ಸಾರ್ವಭೌಮತ್ವಕ್ಕೆ ಸವಾಲೆಸೆಯುವವರಿಗೆ ತಕ್ಕ ಉತ್ತರ

ಎಲ್.ಒ.ಸಿ. ಯಿಂದ ಎಲ್.ಎ.ಸಿ.ವರೆಗೆ ಭಾರತದ ಸಾರ್ವಭೌಮತ್ವಕ್ಕೆ ಸವಾಲೆಸೆಯುವವರಿಗೆ ತಕ್ಕ ಉತ್ತರ ನೀಡಲಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಪಾಕಿಸ್ತಾನ ಹಾಗೂ ಚೀನಾಗಳ ಹೆಸರನ್ನು ಪ್ರಧಾನಿ ನೇರವಾಗಿ ಹೇಳಲಿಲ್ಲವಾದರೂ, ನಿಯಂತ್ರಣ ರೇಖೆ ಹಾಗೂ ನೈಜ ನಿಯಂತ್ರಣ ರೇಖೆ ಕುರಿತು ಅವರು ಮಾತನಾಡಿದ್ದು ಈ ಎರಡು ದೇಶಗಳ ಕುರಿತು ಎಂಬುದು ಸ್ಪಷ್ಟವಾಗಿತ್ತು.

# ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಮಹೇಂದ್ರ ಸಿಂಗ್ ಧೋನಿ

(1ನೇ ಪುಟದಿಂದ) ಪಂದ್ಯಾವಳಿಯನ್ನು ದೇಶದ ಹೊರಕ್ಕೆ ನಡೆಸಲಾಗುತ್ತಿದೆ. ನಿಮ್ಮೆಲ್ಲರ ಪ್ರೀತಿ ಹಾಗೂ ಬಂಬಲಕ್ಕೆ ಧನ್ಯವಾದ ಎಂದಿರುವ ಧೋನಿ, ನಿವೃತ್ತಿಯಾಗಿ ರುವುದಾಗಿ ಪರಿಗಣಿಸುವಂತೆ ಇನ್‌ಸ್ಟಾಗ್ರಾಂ ಮೂಲಕ ಹೇಳಿಕೆ ನೀಡಿದ್ದಾರೆ.

ಮುಂದಿನ ವಾರ ಯುಎಇಗೆ ಚೆನ್ನೈ ಸೂಪರ್‌ಕಿಂಗ್ಸ್ ತಂಡ ತೆರಳಲಿದೆ. ತಂಡಕ್ಕಾಗಿ ಚೆನ್ನೈನಲ್ಲಿ ತರಬೇತಿ ಶಿಬಿರ ಆಯೋಜಿಸಲಾಗಿದ್ದು, ಅಲ್ಲಿಗೆ ತೆರಳಿದ ಮರು ದಿನವೇ ಧೋನಿ ನಿವೃತ್ತಿ ಘೋಷಿಸಿದ್ದಾರೆ.

ಕಳೆದ ವರ್ಷ ಜುಲೈನಲ್ಲಿ ನಡೆದ ವಿಶ್ವಕಪ್ ಸೆಮಿಫೈನಲ್ ಪಂದ್ಯಾವಳಿಯಲ್ಲಿ ಧೋನಿ ಪಾಲ್ಗೊಂಡಿದ್ದೇ ಅವರ ಕೊನೆಯ ಪಂದ್ಯವಾಗಿದೆ.

ಆನಂತರದಿಂದ ಧೋನಿ ಯಾವುದೇ ಪಂದ್ಯದಲ್ಲಿ ಪಾಲ್ಗೊಂಡಿಲ್ಲ. ಹೀಗಾಗಿ ಅವರ ಮುಂದುವರಿಕೆಯ ಬಗ್ಗೆ ವರ್ಷದಿಂದಲೂ ಚರ್ಚೆಗಳು ನಡೆಯುತ್ತಲೇ ಇದ್ದವು.

350 ಏಕದಿನ, 90 ಟೆಸ್ಟ್ ಹಾಗೂ 98 ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಪಾಲ್ಗೊಂಡಿದ್ದ ಧೋನಿ, ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕ್ಯಾಪ್ಟನ್ ಕೂಲ್ ಎಂದೇ ಹೆಸರಾದ ಧೋನಿ, ವಿನೂತನ ರೀತಿಯ ನಾಯಕತ್ವದಿಂದ ಹೆಸರು ಗಳಿಸಿದ್ದರು. 10,773 ಏಕದಿನ ರನ್ ಗಳಿಸಿರುವ ಅವರು, 5ರಿಂದ 7ನೇ ಕ್ರಮಾಂಕದಲ್ಲಿ ಆಡಿದರೂ 50ಕ್ಕೂ ಹೆಚ್ಚು ಸರಾಸರಿ ಹೊಂದಿದ್ದಾರೆ.

2014ರಲ್ಲೇ ಧೋನಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು. ಟೆಸ್ಟ್‌ನಲ್ಲಿ ಅವರು 38.09ರ ಸರಾಸರಿ ಹೊಂದಿದ್ದಾರೆ. ಅವರ ನೇತೃತ್ವದಲ್ಲಿ ಭಾರತ 27 ಟೆಸ್ಟ್‌ಗಳಲ್ಲಿ ಗೆಲುವು ಸಾಧಿಸಿದೆ.

ತಂತ್ರಗಾರಿಕೆಯಲ್ಲಿ ನಿಪುಣರಾದ ಧೋನಿ, ಪಂದ್ಯದ ಪರಿಸ್ಥಿತಿಯನ್ನು ಗ್ರಹಿಸುವ ಅಪಾರ ಸಾಮರ್ಥ್ಯ ಹೊಂದಿದ್ದರು.

ವಿಕೆಟ್ ಕೀಪಿಂಗ್‌ನಲ್ಲಿ ಅವರ ಮಿಂಚಿನ ವೇಗದ ಸ್ಟಂಪಿಂಗ್ ಕ್ರಿಕೆಟ್ ಲೋಕಕ್ಕೆ ಅಚ್ಚರಿಯಾಗಿತ್ತು.

2007ರ ಟಿ20 ಪಂದ್ಯಾವಳಿಯಲ್ಲಿ ಜೋಗಿಂದರ್ ಶರ್ಮಾ ಅವರಿಗೆ ಬೌಲಿಂಗ್ ಮಾಡಲು ನೀಡಿದ ಅವಕಾಶದಿಂದ ಹಿಡಿದು, 2011ರ ಏಕದಿನ ಪಂದ್ಯದಲ್ಲಿ ಫಾರಂನಲ್ಲಿದ್ದ ಯುವರಾಜ್ ಸಿಂಗ್ ಅವರಿಗೆ ಮುಂಚೆ ತಾವೇ ಬ್ಯಾಟಿಂಗ್‌ಗೆ ಆಗಮಿಸುವವರೆಗೆ ಅವರ ನಿರ್ಧಾರಗಳು ಅಪಾಯ ಎನಿಸಿದರೂ ಅದರಲ್ಲಿ ಲೆಕ್ಕಾಚಾರ ಇದ್ದೇ ಇರುತ್ತಿತ್ತು. ಎರಡೂ ಪಂದ್ಯಗಳಲ್ಲಿ ಗೆಲ್ಲುವ ಮೂಲಕ ವಿಶ್ವಕಪ್ ಭಾರತದ ಮಡಿಲಿಗೆ ತಂದಿದ್ದು, ಅವರ ಘನತೆ ಹೆಚ್ಚಿಸಿತ್ತು.

ಐ.ಪಿ.ಎಲ್.ನಲ್ಲೂ ಅವರ ನಾಯಕತ್ವದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಬಲಿಷ್ಟವಾಗಿದ್ದು ಮೂರು ಬಾರಿ ಗೆಲುವು ಸಾಧಿಸಿದೆ.




ವೈಧೀಶ್ವರನ್ ಕೋವಿಲ್ ಶಿವನಾಡಿ

**ಜ್ಯೋತಿಷ್ಯಾಲಯ**

ನಿಮ್ಮ ಹೆಬ್ಬೆಟ್ಟಿನ ಆಧಾರದ ಮೇಲೆ ನಿಮ್ಮ ಭವಿಷ್ಯದಲ್ಲಿ ಬರುವ ಎಲ್ಲ ವಿಷಯಗಳನ್ನೂ ನಿಖರವಾಗಿ ನುಡಿಯುವರು. ಇಂದೇ ಭೇಟಿ ಕೊಡಿ.

ಎ. ರಾಮಲಿಂಗಸ್ವಾಮಿ S/O. ಎಸ್.ವಿ. ಆರ್ಮುಗಂ
#1962/5, ಪ್ರಶಾಂತ ನಿಲಯ, 1ನೇ ಮೇನ್, 5ನೇ ಕ್ರಾಸ್,
ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ-577 005.
ಫೋನ್ : 95917-21017, 99722-65555
ಬೆಳಿಗ್ಗೆ 9.30 ರಿಂದ ಸಂಜೆ 7ರ ವರೆಗೆ.

**SHOP FOR TO LET**
**ಮಳಿಗೆ ಬಾಡಿಗೆಗೆ ಇದೆ**
**GROUND FLOOR**
14'X45' (630 SQ.FT)
**SECOND FLOOR**
6 ROOMS WITH ATTACH
BATH ROOM 15'X15' (225 SQ.FT.)
NEAR GANDHI CIRCLE, OPP.BASAVARAJ LODGE,
P.B. ROAD, DAVANAGERE.
Mobile : 99452 49088, 99001 88514

**ಭಾವಸಾರ ಕ್ಷತ್ರಿಯ ಸಮಾಜ**

ಶ್ರೀಮತಿ ಸಾವಿತ್ರಾಬಾಯಿ ಬೊಂದಾಡೆ ಚ್ಯಾರಿಟಬಲ್ ಟ್ರಸ್ಟ್ ಇವರಿಂದ ಸಮಾಜದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ 2020ರಲ್ಲಿ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿ ಪಾಸಾದ ವಿದ್ಯಾರ್ಥಿನಿಯರಿಂದ 'ಪ್ರೋತ್ಸಾಹ ಧನ' (Scholorship) ಕ್ಕಾಗಿ ಅರ್ಜಿಗಳನ್ನು ಆಹ್ವಾಸಲಾಗಿದೆ. ಆಸಕ್ತ ವಿದ್ಯಾರ್ಥಿನಿಯರು ತಮ್ಮ ಭಾವಚಿತ್ರ, ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿಯೊಂದಿಗೆ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸತಕ್ಕದ್ದು.

**ಆದಿತ್ಯ ಬೊಂದಾಡೆ**
ಚಾರ್ಟರ್ಡ್ ಅಕೌಂಟೆಂಟ್ #537/3, 'ಸಂಪಿಗೆ'
ಮೊದಲನೇ ಮಹಡಿ, 5ನೇ ಮುಖ್ಯ ರಸ್ತೆ. ಪಿ.ಜೆ. ಬಡಾವಣೆ,
ದಾವಣಗೆರೆ-577002.
ಫೋ; 9844821145 /9844821146.

ಟ್ರಸ್ಟಿಗಳು : ದಿವಂಗತ ಸತೀಶ್ ತೇಲ್ಕರ್, ಶ್ರೀಮತಿ ಲತಾ ತೇಲ್ಕರ್, ಆದಿತ್ಯ ಬೊಂದಾಡೆ.


## ಯೂರೋ ಶಾಲೆಯಲ್ಲಿ 74ನೇ ಸ್ವಾತಂತ್ರೋತ್ಸವ



**ನಗರದ ಪ್ರತಿಷ್ಠಿತ ಯೂರೋ ಶಾಲೆಯಲ್ಲಿ 74ನೇ ಸ್ವಾತಂತ್ರ್ಯ ದಿನವನ್ನು ವರ್ಚ್ಯುಯಲ್ ಗೂಗಲ್ ಮೂಲಕ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಹಾಗೂ ಶಿಕ್ಷಕ ವೃಂದದವರಿಂದ ಸರಳವಾಗಿ ಆಚರಿಸಲಾಯಿತು.**

